ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕನ್ನಡತಿ ಜೋಷ್ನಾ ಚಿಣ್ಣಪ್ಪ ಮತ್ತು ವೆಳವನ್ ಸೆಂಥಿಲ್‌ಕುಮಾರ್ ಜೋಡಿ ಏಷ್ಯನ್ ಕ್ರೀಡಾಕೂಟದ ಸ್ಕ್ವಾಷ್ ಮಿಶ್ರ ಡಬಲ್ಸ್‌ನಲ್ಲಿ ಶನಿವಾರ ಕಂಚಿನ ಪದಕಕ್ಕೆ ಕೊರಳೊಡ್ಡಿತು.

27 ಸೆಪ್ಟೆಂಬರ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -196 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಚಿಪ್ಸ್ ತಿನ್ನುವ ಮಂಗ, ಚಿಲ್ಲರೆ ಹೆಕ್ಕುವ ಆನೆ » 2



ಉಡಾಫೆ ಬಿಟ್ಟು ಜನಸಾಮಾನ್ಯರ ಸಮಸ್ಯೆಗೆ ಸ್ಪಂದಿಸಿ » 3



ಹಾನುಬಾಳ್‌ನಲ್ಲಿ ಪ್ರಜಾಸೇವೆ ಆಂದೋಲನ: ಸ್ಥಳದಲ್ಲೇ ಸಮಸ್ಯೆ ಪರಿಹಾರ » 4

# ಕಾಂಗ್ರೆಸ್ ವಿರುದ್ಧ ಸಮರಕ್ಕೆ ಮೈತ್ರಿ ಸಜ್ಜು

## ಪರಿಷತ್, ಸ್ಥಳೀಯ ಸಂಸ್ಥೆ ಚುನಾವಣೆ | ಬಿಜೆಪಿ-ಜೆಡಿಎಸ್ ನಾಯಕರ ಮಹತ್ವದ ಸಮಾಲೋಚನೆ

• ಪ್ರಜೋದಯ ವರದಿ

**ಬೆಂಗಳೂರು:** ಮುಂಬರುವ ವಿಧಾನ ಪರಿಷತ್, ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನಲೆ ಶನಿವಾರ ಎನ್‌ಡಿಎ ನಾಯಕರು ಮಹತ್ವದ ಸಭೆ ನಡೆಸಿ ಕಾರ್ಯತಂತ್ರ ಕುರಿತು ಸಮಾಲೋಚನೆ ನಡೆಸಿದರು. ರಾಜ್ಯದಲ್ಲಿ ವಿಧಾನ ಪರಿಷತ್ ಚುನಾವಣೆಯನ್ನು ಎನ್‌ಡಿಎ ಮೈತ್ರಿಕೂಟ ಗಂಭೀರವಾಗಿ ಪರಿಗಣಿಸಿದ್ದು, ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಗೆಲುವಿಗೆ ಈಗಿನಿಂದಲೇ ಅಗತ್ಯ ಸಿದ್ಧತೆಗೆ ಮುಂದಾಗಿದೆ.

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಹೆಚ್. ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ, ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮುಂತಾದ ನಾಯಕರು ಸಭೆಯಲ್ಲಿ ಮಹತ್ತರ ಚರ್ಚೆ ನಡೆಸಿದರು.

**ಸಚಿವ ಪ್ರಲ್ಹಾದ ಜೋಶಿ ಕರೆ**

ವಿಧಾನ ಪರಿಷತ್ ಚುನಾವಣೆಯಲ್ಲಿ ರಾಜ್ಯ ಸರ್ಕಾರದ ವೈಫಲ್ಯಗಳನ್ನು ತೆರೆದಿಡಬೇಕು. ರಾಜ್ಯದಲ್ಲಿ ಬೆಲೆ ಏರಿಕೆ, ಭ್ರಷ್ಟಾಚಾರ ಮತ್ತು ತುಷ್ಟೀಕರಣದ ರಾಜಕಾರಣ ಎಲ್ಲೇ ಮೀರಿದ್ದು,





ಅದರ ವಿರುದ್ಧ ಹೋರಾಡುತ್ತಲೇ ಚುನಾವಣೆ ಗೆಲುವಿಗೆ ಎನ್‌ಡಿಎ ನಾಯಕರು, ಕಾರ್ಯಕರ್ತರು ಒಟ್ಟಾಗಿ ಶ್ರಮಿಸಬೇಕು. ರಾಜ್ಯದಲ್ಲಿ ಬರ ಪರಿಸ್ಥಿತಿ ನಿಭಾಯಿಸುವಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಇನ್ನೂ ತಡವರಿಸುತ್ತಿದೆ. ಕಾಂಗ್ರೆಸ್ ಸರ್ಕಾರದ ಧನ ದಾಹಕ್ಕೆ ಅಧಿಕಾರಿಗಳು, ಗುತ್ತಿಗೆದಾರರು, ರೈತರು ನೇಣಿಗೆ ಕೊರಳೊಡ್ಡುವ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯದ ಅಭಿವೃದ್ಧಿಗೆ ಆರ್ಥಿಕ ಇಲಾಖೆ ವಿತ್ತ ಕೊರತೆ ಎಂದು ಹೇಳಿ ಕೈ ಚೆಲ್ಲಿ ಕುಳಿತಿದೆ. ಇದೆಲ್ಲದರ ಬಗ್ಗೆಯೂ ಜನ ಜಾಗೃತಿ ಮೂಡಿಸಬೇಕು. ಕಾಂಗ್ರೆಸ್ ಪಕ್ಷದಲ್ಲಿ

### ಮುಖ್ಯಮಂತ್ರಿ ರೇಸ್ ಸೃಷ್ಟಿಸಬೇಡಿ

ಕುಮಾರಸ್ವಾಮಿ ಹಾಗು ನನ್ನ ಮಧ್ಯೆ ಮುಖ್ಯಮಂತ್ರಿ ರೇಸ್ ಸೃಷ್ಟಿಸಬೇಡಿ. ಮುಖ್ಯಮಂತ್ರಿ ಯಾರು ಅನ್ನೋದನ್ನ ಹೈಕಮಾಂಡ್ ತೀರ್ಮಾನಿಸಲಿ. ಅದರ ಬಗ್ಗೆ ಮುಖಂಡರು, ಕಾರ್ಯ ಕರ್ತರು ಬಹಿರಂಗ ಚರ್ಚೆ ನಡೆಸಬಾರದು. ಹೇಳಿಕೆ, ಘೋಷಣೆ ಕೂಗ ಬಾರದೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸಭೆಯಲ್ಲಿ ಕಾರ್ಯಕರ್ತರಿಗೆ ಮನವಿ ಮಾಡಿದರು.

### 180 ಸ್ಥಾನ ಗೆಲ್ಲಲು ಟಾರ್ಗೆಟ್

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮಾತನಾಡಿ, ಮುಂದಿನ ಎಲ್ಲಾ ಚುನಾವಣೆಗಳನ್ನೂ ಎನ್‌ಡಿಎ ಮೈತ್ರಿಯಡಿ ಒಗ್ಗಟ್ಟಿನಿಂದ ಎದುರಿಸಬೇಕು. ಬಿಹಾರ ಮಾದರಿಯಲ್ಲಿ ಮುಂದಿನ ಚುನಾವಣೆ ನಡೆಸಬೇಕು ಎಂದರಲ್ಲದೇ 180 ಸ್ಥಾನ ಗೆಲ್ಲಲು ಗುರಿ ನಿಗದಿ ಮಾಡಿದರು. ಕುಮಾರಸ್ವಾಮಿ ಅಭಿಪ್ರಾಯವನ್ನು ಬಿಜೆಪಿ ನಾಯಕರು ಸ್ವಾಗತಿಸಿದರು.

ವಿರೋಧಾಭಾಸವಿದೆ. ಬರದ ನೆಪವೊಡ್ಡಿ ಆ ಪಕ್ಷದ ಶಾಸಕರೇ ರಾಜೀನಾಮೆ ಬೆದರಿಕೆ ಹಾಕುತ್ತಿದ್ದಾರೆ. ಇನ್ನೊಂದೆಡೆ ಖಜಾನೆ ಖಾಲಿಯಾಗಿದೆ. ಆಡಳಿತ ವೈಫಲ್ಯವನ್ನು ಜನರಿಗೆ ಮನವರಿಕೆ ಮಾಡಿಕೊಡಿ ಎಂದು ಜೋಶಿ ಅಗತ್ಯ ಸಲಹೆ ನೀಡಿದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಮಾತನಾಡಿ, ಬಿಜೆಪಿ-ಜೆಡಿಎಸ್ ಜೊತೆಯಾಗಿ ಚುನಾವಣೆ ಯನ್ನು ಎದುರಿಸಲಿದ್ದೇವೆ. ಚುನಾವಣೆ ಬಂದಾಗ ಸಿದ್ದರಾಮಯ್ಯ,» 4ನೇ ಪುಟದಲ್ಲಿ

# ಆಧ್ಯಾತ್ಮಿಕತೆಯಿಂದ ನೆಮ್ಮದಿ ಸಾಧ್ಯ: ಮಾವಳ್ಳಿ ಶಂಕರ್

## ಆದಿಚುಂಚನಗಿರಿ ಸಮುದಾಯ ಭವನದಲ್ಲಿ ತಿಂಗಳ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಆಧುನಿಕ ತಂತ್ರಜ್ಞಾನ ಮತ್ತು ವಿಜ್ಞಾನ ವಿವಿಧ ಸ್ವರೂಪಗಳಲ್ಲಿ ಬೆಳೆದಿದ್ದರೂ ಮನುಷ್ಯನಿಗೆ ಸಂಪೂರ್ಣ ಸಂತೋಷ ಹಾಗು ನೆಮ್ಮದಿ ದೊರೆಯಲು ಆಧ್ಯಾತ್ಮಿಕ ಮಾರ್ಗ ಅಗತ್ಯವೆಂದು ಪತ್ರಕರ್ತ ಮಾವಳ್ಳಿ ಶಂಕರ್ ಅವರು ಹೇಳಿದರು.

ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶನಿವಾರ ನಡೆದ ಗುರು ತೋರಿದ ದಾರಿ-ತಿಂಗಳ ಮಾಮನ ತೇರು 145ನೇ ಹುಣ್ಣಿಮೆ ಕಾರ್ಯಕ್ರಮದಲ್ಲಿ ತಿಂಗಳ ಮಾಮ ವಿಷಯ ಕುರಿತು ಮಾತನಾಡಿದ ಅವರು, ಆಧ್ಯಾತ್ಮಿಕತೆಯು ಮನುಷ್ಯನನ್ನು ಒಂಟಿತನ ದಿಂದ ಹೊರತರಲು ನೆರವಾಗುತ್ತದೆ. ಈ ನಿಟ್ಟಿನಲ್ಲಿ ಆದಿ ಚುಂಚನಗಿರಿ ಮಠ ಉತ್ತಮ ಕಾರ್ಯ ಮಾಡುತ್ತಿದೆ. ಮಠವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಭಾಗದ ಮಕ್ಕಳಿಗೂ ಶಿಕ್ಷಣದ ಅವಕಾಶ ಕಲ್ಪಿಸಿದೆ. ಇಲ್ಲಿ ವ್ಯಾಸಂಗ ಮಾಡುವ ಅವಕಾಶ ದೊರೆತಿರುವುದು ಪುಣ್ಯ ಎಂದರು.



ಸ್ವಾಮಿ ವಿವೇಕಾನಂದರು ಚಿಕಾಗೋದಲ್ಲಿ ಮಾಡಿದ ಭಾಷಣದ ಮೂಲಕ ಭಾರತದ ಆಧ್ಯಾತ್ಮಿಕ ಶಕ್ತಿಯನ್ನು ಜಗತ್ತಿಗೆ ಪರಿಚಯಿಸಿದರು. ಗ್ರಾಮೀಣ ಜನರ ಬದುಕಿನ ನೋವು, ಸಂಕಷ್ಟಗಳು ಜಾನಪದ ಹಾಡುಗಳ ಮೂಲಕ ವ್ಯಕ್ತವಾಗಿವೆ. ಜನರ ಬದುಕಿಗೆ ಬೆಳಕು ನೀಡುವವರು, ನೊಂದವರಿಗೆ ನೆರವಾಗುವವರು ದೇವರ ಸ್ಥಾನದಲ್ಲಿರುತ್ತಾರೆ. ಅದಕ್ಕೆ ಆದಿ ಚುಂಚನಗಿರಿ ಮಹಾಸಂಸ್ಥಾನದ ಡಾ.ಬಾಲಗಂಗಾಧರನಾಥ ಮಹಾಸ್ವಾಮೀಜಿ ಸಾಕ್ಷಿಯಾಗಿದ್ದಾರೆಂದು ಹೇಳಿದರು.

ಗೌತಮ ಬುದ್ಧರು ಜ್ಞಾನಕ್ಕೆ ಮಹತ್ವ

> ಹೆಂಡ ಬೇಡ, ವಸತಿ ಶಾಲೆ ಬೇಕು ಎಂಬ ಬೇಡಿಕೆಯೊಂದಿಗೆ ಹಾಸನದಿಂದ ಹೋರಾಟ ನಡೆದಿತ್ತು. ರಾಜ್ಯದಲ್ಲಿ 1,300ಕ್ಕೂ ಹೆಚ್ಚು ವಸತಿ ಶಾಲೆಗಳಿದ್ದು, ಸುಮಾರು ಎರಡು ಲಕ್ಷ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಅದಕ್ಕೆ ವೇದಿಕೆ ಕಲ್ಪಿಸಿಕೊಟ್ಟಿದ್ದೇ ಹಾಸನ.
> -ಮಾವಳ್ಳಿ ಶಂಕರ್, ಪತ್ರಕರ್ತ

ನೀಡಿದರು. ಅರಮನೆಯ ಸುಖ-ಸಂತೋಷಗಳನ್ನು ತ್ಯಜಿಸಿ ಸನ್ಯಾಸತ್ವ ಸ್ವೀಕರಿಸಿ ಜ್ಞಾನ ಸಂಪಾದಿಸಿದರು. ಕಳ್ಳತನ ಮಾಡಬಾರದು, ಅನೈತಿಕ » 4ನೇ ಪುಟದಲ್ಲಿ

# ಸರ್ಕಾರದ ಆರ್ಥಿಕ ಸ್ಥಿತಿ ಉತ್ತಮ: ಶಿವಲಿಂಗೇಗೌಡ

• ಪ್ರಜೋದಯ ವರದಿ



**ಹಾಸನ:** ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದ್ದು, ಎಲ್ಲಾ ಯೋಜನೆಗಳು ಯಾವುದೇ ಅಡಚಣೆಗಳಿಲ್ಲದೆ ಮುಂದುವರಿಯುತ್ತಿವೆ. ಸರ್ಕಾರದ ಹಣಕಾಸಿನ ಸ್ಥಿತಿಗತಿಗಳ ಬಗ್ಗೆ ವಿರೋಧ ಪಕ್ಷಗಳು ಅನಗತ್ಯ ಗೊಂದಲ ಸೃಷ್ಟಿಸುತ್ತಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ಆರ್ಥಿಕ ಸ್ಥಿತಿಯಲ್ಲಿ ಯಾವುದೇ ತೊಂದರೆ ಇಲ್ಲ. ಯಾವ ಕಾರ್ಯಕ್ರಮಕ್ಕೆ ಅನುದಾನ ನೀಡಿಲ್ಲ? ಯಾವ ಯೋಜನೆಗಳು ಸ್ಥಗಿತಗೊಂಡಿವೆ ಎಂಬುದನ್ನು ವಿರೋಧ ಪಕ್ಷದವರು ಸ್ಪಷ್ಟಪಡಿಸಲಿ ಎಂದು ಪ್ರಶ್ನಿಸಿದರು.

ಹಿಂದಿನ ಸರ್ಕಾರಗಳ ಅವಧಿಯಲ್ಲಿ ಹಣಕಾಸಿನ ಪರಿಸ್ಥಿತಿ ಹೇಗಿತ್ತು ಎಂಬುದನ್ನು ದಾಖಲಾತಿಗಳೊಂದಿಗೆ ಸಂಗ್ರಹಿಸಿ ಮಂಡಿಸಲಾಗುವುದು. ಯಾವ ಸರ್ಕಾರದ ಅವಧಿಯಲ್ಲಿ ಏನೆಲ್ಲಾ ನಡೆದಿದೆ ಎಂಬುದನ್ನು ದಾಖಲೆಗಳ ಸಮೇತ ಜನರ ಮುಂದಿಡಲಾಗುವುದು. ಹಣಕಾಸು ಇಲಾಖೆಯು ಬಜೆಟ್ ಆಧಾರದಲ್ಲಿ ಟಿಪ್ಪಣಿ ಸಿದ್ಧಪಡಿಸಿ, ಎಷ್ಟು ಹಣದ ಕೊರತೆಯಿದೆ ಅಥವಾ ಎಷ್ಟು ಮೊತ್ತವನ್ನು ಹೊಂದಿಸಬೇಕಿದೆ ಎಂಬುದನ್ನು ತಿಳಿಸುವುದು ಸಹಜ ಪ್ರಕ್ರಿಯೆ. ಅದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಹಣಕಾಸು ಇಲಾಖೆ ನೀಡಿರುವ ಟಿಪ್ಪಣಿಯನ್ನು ಮುಂದಿಟ್ಟು ಕೊಂಡು ವಿರೋಧ ಪಕ್ಷದವರು ಪ್ರತಿಭಟನೆ ನಡೆಸುತ್ತಿದ್ದಾರೆಂದು ಹೇಳಿದರು.

ಹಣಕಾಸು ಇಲಾಖೆಯು ಎಲ್ಲಾ ಯೋಜನೆಗಳಿಗೂ ಸಂಬಂಧಿಸಿದಂತೆ ಟಿಪ್ಪಣಿ ನೀಡುವುದು ಸಾಮಾನ್ಯ ಪ್ರಕ್ರಿಯೆ. ಪೂರ್ಣ ಪ್ರಮಾಣದಲ್ಲಿ ಹಣಕಾಸು ಲಭ್ಯವಿದ್ದರೆ ಅದರ ವಿವರ ನೀಡಲಾಗುತ್ತದೆ. ಹಣದ ಕೊರತೆಯಿದ್ದರೂ ಅದನ್ನು ಸ್ಪಷ್ಟಪಡಿಸಲಾಗುತ್ತದೆ. ಇದು ಎಲ್ಲಾ ಸರ್ಕಾರಗಳ ಅವಧಿಯಲ್ಲಿಯೂ ನಡೆಯುವ ಸಹಜ ಪ್ರಕ್ರಿಯೆಯಾಗಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿಯೂ ಇಂತಹ ಟಿಪ್ಪಣಿಗಳು ಬಂದಿವೆ ಎಂದು ತಿಳಿಸಿದರು.

ಲಭ್ಯವಿರುವ ಹಣದ ಮೂರನೇ ಒಂದು ಭಾಗವನ್ನು ಆಧರಿಸಿ ಕ್ರಿಯಾ ಯೋಜನೆಗಳನ್ನು ರೂಪಿಸಲಾಗುತ್ತದೆ. ಮುಂದಿನ ಬಜೆಟ್‌ನಲ್ಲಿ ಅಗತ್ಯ ಅನುದಾನ ಹೊಂದಿಸುವ ಮೂಲಕ ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗಲಾಗುವುದೆಂದು ಸಚಿವರು ಹೇಳಿದರು.

## ಗ್ರಾಮೀಣ ಕಲೆ, ಸಂಸ್ಕೃತಿಗೆ ಒತ್ತು : ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ

# ಹಾಸನಾಂಬ ದರ್ಶನೋತ್ಸವಕ್ಕೆ ಕಲಾವೈಭವದ ಮೆರುಗು

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಮತ್ತು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವವನ್ನು ಈ ಬಾರಿ ಕಲಾ ವೈಭವದೊಂದಿಗೆ ದೊಡ್ಡ ಹಬ್ಬವಾಗಿ ಆಚರಿಸಲಾಗುವುದು. ಉತ್ಸವದಲ್ಲಿ ಗ್ರಾಮೀಣ ಕಲೆ, ಸಂಸ್ಕೃತಿ ಹಾಗೂ ಸಾಂಪ್ರದಾಯಿಕ ಕಲಾ ಪ್ರಕಾರಗಳಿಗೆ ಆದ್ಯತೆ ನೀಡಲಾಗುವುದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ತಿಳಿಸಿದರು.

ನಗರದ ಹಿಮ್ಸ್ ಸಭಾಂಗಣದಲ್ಲಿ ಶನಿವಾರ ನಡೆದ ಹಾಸನಾಂಬ ದರ್ಶನೋತ್ಸವದ ಪೂರ್ವಭಾವಿ ಸಭೆಯಲ್ಲಿ ಉತ್ಸವದ ಪೋಸ್ಟರ್ ಮತ್ತು ವೆಬ್‌ಸೈಟ್ ಅನಾವರಣಗೊಳಿಸಿ ಮಾತನಾಡಿದ ಅವರು, ಹಾಸನಾಂಬ ದರ್ಶನೋತ್ಸವ ಜಿಲ್ಲೆಯ ಹಬ್ಬವಾಗಿದ್ದು, ವರ್ಷಕ್ಕೊಮ್ಮೆ ನಡೆಯುವ ದೇವಿಯ ದರ್ಶನಕ್ಕೆ ರಾಜ್ಯದ ವಿವಿಧೆಡೆಯಿಂದ ಭಕ್ತರು ಆಗಮಿಸುತ್ತಾರೆ. ಭಕ್ತರಿಗೆ ಉತ್ತಮ ಸೇವೆ ಒದಗಿಸಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ. ಕಳೆದ ವರ್ಷ ಉತ್ಸವಕ್ಕೆ ರಾಜ್ಯಮಟ್ಟದಲ್ಲಿ ಉತ್ತಮ ಹೆಸರು ದೊರೆತಿದ್ದು, ಈ ಬಾರಿ ಅದಕ್ಕಿಂತಲೂ ಹೆಚ್ಚಿನ ವ್ಯವಸ್ಥೆ ಕಲ್ಪಿಸಿ ಯಶಸ್ವಿಯಾಗಿ ನಡೆಸಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಹಿಂದಿನ ವರ್ಷದ ಸಾಧಕ-ಬಾಧಕಗಳನ್ನು ಚರ್ಚಿಸಿ, ಅಗತ್ಯ





### ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆಗೆ ಒತ್ತು

ಹಾಸನಾಂಬ ಉತ್ಸವದ ಎಲ್ಲಾ ಟೆಂಡರ್ ಪ್ರಕ್ರಿಯೆಗಳನ್ನು ಸಾರ್ವಜನಿಕವಾಗಿ ನಡೆಸಲಾಗುವುದು. ದೇವರ ಹಣದ ಲೆಕ್ಕಾಚಾರದಲ್ಲಿ 10 ಪೈಸೆಯೂ ವ್ಯತ್ಯಾಸವಾಗದಂತೆ ಎಚ್ಚರಿಕೆ ವಹಿಸಲಾಗುವುದು. ದೇವರ ಕಾರ್ಯವನ್ನು ಪಾರದರ್ಶಕತೆಯಿಂದ ನಿರ್ವಹಿಸಲಾಗುವುದು. ಟೆಂಡರ್‌ದಾರರು ಕೂಡ ತಾಯಿಯ ಸೇವೆ ಮಾಡುವ ಅವಕಾಶ ಸಿಕ್ಕಿದೆ ಎಂಬ ಭಾವನೆಯಿಂದ ಕೆಲಸ ಮಾಡಬೇಕು. ಉತ್ಸವದ ಹೆಸರಿನಲ್ಲಿ ದುಂದುವೆಚ್ಚಕ್ಕೆ ಅವಕಾಶ ನೀಡುವುದಿಲ್ಲ. ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡುವ ಮೂಲಕ ಪ್ರತಿಯೊಂದು ರೂಪಾಯಿಗೂ ಲೆಕ್ಕ ನೀಡಲಾಗುವುದೆಂದು ಸಚಿವ ಕೆ.ಎಂ.ಶಿವಲಿಂಗೇಗೌಡ ಭರವಸೆ ನೀಡಿದರು.

ಕ್ರಮ ಕೈಗೊಳ್ಳಲಾಗುವುದೆಂದರು.

ಮುಖ್ಯಮಂತ್ರಿ ಅವರು ಕನಕಪುರದಲ್ಲಿ ಆಯೋಜಿಸಿದ್ದ ಕನಕೋತ್ಸವ ಮಾದರಿಯಲ್ಲಿ ಹಾಸನಾಂಬ ಉತ್ಸವವನ್ನು ದೊಡ್ಡ ಹಬ್ಬವಾಗಿ ರೂಪಿಸುವ ಚಿಂತನೆ ಇದೆ. ಹಾಸನಾಂಬ ಆಶೀರ್ವಾದದಿಂದ ಈ ಬಾರಿ ಉತ್ಸವವನ್ನು ಅದ್ದೂರಿಯಾಗಿ ಆಚರಿಸುವ ಅವಕಾಶ ದೊರೆತಿದ್ದು, ಈ ನಿಟ್ಟಿನಲ್ಲಿ ಈಗಾಗಲೇ ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದರು.

ಸನಾತನ ಪರಂಪರೆ ಹಾಗು ಗ್ರಾಮೀಣ ಭಾಗದ ಕಲಾ ಕೌಶಲಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು. » 4ನೇ ಪುಟದಲ್ಲಿ

### ಈ ಬಾರಿ 12 ದಿನ ದೇವಿ ದರ್ಶನ

ಈ ವರ್ಷ ಅ.29 ರಿಂದ ನ.11ರ ವರೆಗೆ ಒಟ್ಟು 14 ದಿನಗಳ ಕಾಲ ಹಾಸನಾಂಬ ದರ್ಶನ ಇರಲಿದೆ. ಅ.29 ರಂದು ಮಧ್ಯಾಹ್ನ 12 ಗಂಟೆಗೆ ಹಾಸನಾಂಬ ದೇಗುಲದ ಬಾಗಿಲು ತೆರೆಯಲಿದೆ. ಮೊದಲ ದಿನ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಅ.30 ರಿಂದ ನ.10ರ ವರೆಗೆ ನೈವೇದ್ಯ ಸಮಯ ಹೊರತುಪಡಿಸಿ ದಿನಪೂರ್ತಿ ದೇವಿ ದರ್ಶನ ಇರಲಿದೆ. ನ.11 ರಂದು ಗರ್ಭಗುಡಿ ಬಾಗಿಲು ಮುಚ್ಚಲಾಗುತ್ತದೆ. ಕೊನೆಯ ದಿನ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಇರುವುದಿಲ್ಲ.

> ಜಾತ್ರೆಯನ್ನು ಯಾವುದೇ ಲೋಪವಿಲ್ಲದೆ ಉತ್ತಮವಾಗಿ ನಡೆಸುವ ಉದ್ದೇಶವಿದೆ. ಹಾಸ ನಾಂಬ ಜಾತ್ರಾ ಮಹೋತ್ಸವವನ್ನು ವ್ಯವಸ್ಥಿತವಾಗಿ ನಡೆಸಲು ಅಧಿಕಾರಿಗಳು ತಮಗೆ ವಹಿಸಿ ರುವ ಜವಾಬ್ದಾರಿಯನ್ನು ಸಮರ್ಪಕ ವಾಗಿ ನಿರ್ವಹಿಸಿ ಜಿಲ್ಲಾಡಳಿತಕ್ಕೆ ಸಹಕಾರ ನೀಡಬೇಕು. ಜನಪ್ರತಿನಿಧಿಗಳು ಹಾಗು ಸಾರ್ವಜನಿಕರು ಪರಸ್ಪರ ಸಹಕಾರ ನೀಡಬೇಕು.
> -ಹೆಚ್.ಪಿ.ಸ್ವರೂಪ್, ಶಾಸಕ

# ದೊಡ್ಡಗದ್ದವಳ್ಳಿ ಲಕ್ಷ್ಮಿದೇವಿ ದೇಗುಲದಲ್ಲಿ ಕಳ್ಳತನ

• ಪ್ರಜೋದಯ ವರದಿ

**ಹಾಸನ:** ಹೊಯ್ಸಳರ ಕಾಲದ ಪುರಾಣ ಪ್ರಸಿದ್ಧವಾದ ತಾಲ್ಲೂಕಿನ ದೊಡ್ಡಗದ್ದವಳ್ಳಿ ಲಕ್ಷ್ಮಿ ದೇವಿ ದೇಗುಲದಲ್ಲಿ 1.49 ಲ.ರೂ. ಮೌಲ್ಯದ ಆಭರಣ ಕಳುವಾಗಿದೆ.

ಈ ದೇವಾಲಯವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಅಧೀನಕ್ಕೆ ಒಳಪಟ್ಟಿದ್ದು ಭದ್ರತಾ ಸಿಬ್ಬಂದಿ ಇದ್ದರೂ ಕಳ್ಳರು ಕೈಚಳಕ ತೋರಿದ್ದು ಆಶ್ಚರ್ಯ ಮೂಡಿಸಿದೆ.

ಸೆ.23 ರಂದು ಹೊರಗುತ್ತಿಗೆ ಸಿಬ್ಬಂದಿ ಕರ್ತವ್ಯಕ್ಕೆ ಬಂದಾಗ ಕಳ್ಳತನವಾಗಿರುವುದು ತಿಳಿದಿದೆ. ಎಂಟಿಎಸ್ ಸಿಬ್ಬಂದಿ ಸುಧಾರಾಣಿ ಅವರು ನೀಡಿದ ಮಾಹಿತಿ ಮೇರೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಹಿರಿಯ ಸಂರಕ್ಷಣಾ ಸಹಾಯಕ ಕೆ.ಎಂ.ಸುನೀಲ್ ಕುಮಾರ್, ದೇವಸ್ಥಾನ ಸಮಿತಿ ಸದಸ್ಯರು ಪರಿಶೀಲಿಸಿದ್ದಾರೆ. ತಡರಾತ್ರಿ ದೇವಾಲಯಕ್ಕೆ ನುಗ್ಗಿರುವ ಕಳ್ಳರು 15 ಹಿತ್ತಾಳೆಯ ದೀಪ, 15 ಹಿತ್ತಾಳೆಯ ತಟ್ಟೆ, 15 ಧಾರೆಪಾತ್ರ, 15 ಚಿಕ್ಕ ಹಿತ್ತಾಳೆಯ ದೀಪ, 1 ತ್ರಿಶೂಲ, 2 ಶಂಖ, 2 ಬೆಳ್ಳಿ ಕುಂಕುಮದ ಬಟ್ಟಲು, 2 ಹಿತ್ತಾಳೆ ಶಿವನ ಪ್ರಭಾವಳಿ, 1 ಪಂಚಾರತಿ ದೀಪ, 2 ಚಿನ್ನದ ತಾಳಿ, 4 ಚಿನ್ನದ ಕಾಸು, 1 ಬೆಳ್ಳಿ ಮಾಂಗಲ್ಯ ಸರ, ಬೆಳ್ಳಿ ಕಿರೀಟ, 2 ಪಂಚಪಾತ್ರೆ, 5 ಉದ್ದರಣಿಗೆ, 2 ಹಿತ್ತಾಳೆಯ ಕೊಡ, 1 ತಾಮ್ರದ ಚೊಂಬು, 1 ಆರತಿ ದೀಪ, 15 ಕರ್ಪೂರದ ದೀಪಗಳನ್ನು ಕದ್ದಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹೇಮಾವತಿ ಸಕ್ಕರೆ ಕಾರ್ಖಾನೆ ಷೇರುದಾರರಿಗೆ ತಲಾ 30 ಕೆ.ಜಿ. ಸಕ್ಕರೆ

## ಆಡಳಿತ ಮಂಡಳಿ ಚುನಾವಣೆಗೆ ಶಾಸಕ ಬಾಲಕೃಷ್ಣ ಆಗ್ರಹ | ಸರ್ವ ಸದಸ್ಯರ ವಾರ್ಷಿಕ ಮಹಾಸಭೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ಚುನಾವಣೆ ಬಳಿಕ ಪ್ರತಿ ಷೇರುದಾರರಿಗೆ ತಲಾ 30 ಕೆ.ಜಿ. ಸಕ್ಕರೆ ವಿತರಿಸಲಾಗುವುದೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ತಾಲ್ಲೂಕಿನ ಶ್ರೀನಿವಾಸಪುರ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಶನಿವಾರ ನಡೆದ ಪ್ರಸಕ್ತ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಸರ್ವ ಸದಸ್ಯರ ಸಭೆಯಲ್ಲಿ ಸಕ್ಕರೆ ವಿತರಣೆಗೆ ತೀರ್ಮಾನಿಸಲಾಗಿತ್ತು. ಅಂದು ಚುನಾವಣೆ ನಡೆಸಲು ಸರ್ಕಾರ ಮುಂದಾಗಿತ್ತು. ಹಾಗಾಗಿ ವಿತರಣೆ ಮಾಡಲಾಗಲಿಲ್ಲ ಎಂದರು.

ಚುನಾವಣೆ ನಡೆಸುವಂತೆ ಹಲವು ಬಾರಿ ಸರ್ಕಾರಕ್ಕೆ ಆಡಳಿತ ಮಂಡಳಿ ಮನವಿ ಮಾಡಲಾಗಿದ್ದು, ಆದರೂ ಸರ್ಕಾರ ಚುನಾವಣೆಗೆ ಮುತುವರ್ಜಿ ತೋರದೆ ಇರುವುದರಿಂದ ಒಂದು ವರ್ಷ ಕಳೆದಿದೆ. ಈಗಾಗಲೇ ಆಡಳಿತ ಮಂಡಳಿಯಿಂದ ಷೇರುದಾರರ ಮತಪಟ್ಟಿ ತಯಾರು ಮಾಡಿ ಸಹಕಾರ ಇಲಾಖೆಗೆ ನೀಡಲಾಗಿದೆ. ಈಗಲಾದರು ಚುನಾವಣೆ ಮಾಡಿದರೆ ಸಕ್ಕರೆ ವಿತರಣೆಗೆ ಅನುಕೂಲವಾಗುತ್ತದೆಂದರು.

ಮುಂದಿನ ವಾರ ಸಹಕಾರ ಸಚಿವ ಲಕ್ಷ್ಮಣ ಸವದಿ ಶ್ರವಣಬೆಳಗೊಳಕ್ಕೆ ಭೇಟಿ ನೀಡಲಿದ್ದಾರೆ. ಆ ಸಂದರ್ಭದಲ್ಲಿ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ಚುನಾವಣೆಯನ್ನು ನಡೆಸುವಂತೆ ಮನವಿ ಮಾಡಲಾಗುವುದು. ಕಾರ್ಖಾನೆ ಷೇರುದಾರರಿಗೆ ಸಕ್ಕರೆ ವಿತರಿಸಲು ಈಗಾಗಲೇ 4.50 ಕೋ. ರೂ. ಮೀಸಲಿಡಲಾಗಿರುವುದನ್ನು ಗಮನಕ್ಕೆ ತರುವ ಮೂಲಕ ಷೇರುದಾರರಿಗೆ ಅನುಕೂಲ ಮಾಡಲಾಗುವುದು ಎಂದರು.

ಕಾರ್ಖಾನೆಗೆ ಹೆಚ್ಚು ಕಬ್ಬು ಪೂರೈಸುವ ರೈತರನ್ನು ರಾಷ್ಟ್ರೀಯ ಹಬ್ಬಗಳ ಆಚರಣೆಯಲ್ಲಿ ಸನ್ಮಾನಿಸಲಾಗುತ್ತಿದೆ. ಆ ಬದಲಿಗೆ ಕಾರ್ಖಾನೆಯಲ್ಲಿ ಸನ್ಮಾನಿಸಿದರೆ ಅರ್ಥಪೂರ್ಣವಾಗಿರುತ್ತದೆಂದರು.

ಟಿಎಪಿಸಿಎಂಎಸ್ ನಿರ್ದೇಶಕ ಎಂ.ಆರ್.ಅನಿಲ್ ಅವರು ಮಾತನಾಡಿ, ಕಾರ್ಖಾನೆಗೆ ಹೆಚ್ಚು ಕಬ್ಬು ಸರಬರಾಜು ಮಾಡುವವರನ್ನು ಸರ್ವ ಸದಸ್ಯರ ಸಭೆಯಲ್ಲಿ ಸನ್ಮಾನಿಸುವಂತೆ ಮನವಿ ಮಾಡಿದ್ದೆ. ಅದನ್ನು ನಡಾವಳಿ ಪುಸ್ತಕದಲ್ಲಿ ನಮೂದಿಸಲಾಯಿತೇ ಹೊರತು ಅನುಷ್ಠಾನಗೊಳಿಸಲಿಲ್ಲ. ಈ ವರ್ಷವೂ ಕಬ್ಬು ಬೆಳೆಯುವ ರೈತರಿಗೆ ಸನ್ಮಾನ ಮಾಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಟಿಎಪಿಸಿಎಂಎಸ್ ನಿರ್ದೇಶಕ ರಮೇಶ್ ಅವರು ಮಾತನಾಡಿ, ಕಾರ್ಖಾನೆಗೆ ಸೇರಿರುವ 17 ಎಕರೆ ಭೂಮಿ ಪಟ್ಟಣಕ್ಕೆ ಹೊಂದಿಕೊಂಡಿದೆ. ಅದನ್ನು ರಕ್ಷಣೆ ಮಾಡಬೇಕು. ಆ ಸ್ಥಳದಲ್ಲಿ ರೈತರಿಗೆ ಅನುಕೂಲ ಆಗುವ ಕಾರ್ಖಾನೆ ತೆರೆಯುವಂತೆ ಕಳೆದ ಸಾಲಿನ ಸಭೆಯಲ್ಲಿ ಮನವಿ ಮಾಡಲಾಗಿತ್ತು. ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿಯೊಂದಿಗೆ ಚರ್ಚಿಸಲಾಗುವುದೆಂದು ಹೇಳಿ ವರ್ಷ ಕಳೆದರೂ ಇದು ಕಾರ್ಯರೂಪಕ್ಕೆ ಬಂದಿಲ್ಲ ಎಂದರು.

**ನಲ್ಲೂರು ಗ್ರಾ.ಪಂ. ವಿರುದ್ಧ ಆಕ್ರೋಶ**

ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ನಲ್ಲೂರು ಅನಿಲ್ ಅವರು ಮಾತನಾಡಿ, ಕಾರ್ಖಾನೆಯಿಂದ ಎಂಟು ಲಕ್ಷ ರೂ. ತೆರಿಗೆಯನ್ನು ನಲ್ಲೂರು ಗ್ರಾಮ ಪಂಚಾಯಿತಿಗೆ ಕಟ್ಟಲಾಗಿದೆ. ಆದರೂ ಗ್ರಾಮ ಪಂಚಾಯಿತಿ ವತಿಯಿಂದ ಬೆಳಕಿನ ವ್ಯವಸ್ಥೆ ಮಾಡಿಲ್ಲ, ಕಬ್ಬು ತುಂಬಿದ ಎತ್ತಿನ ಗಾಡಿ, ಟ್ರ್ಯಾಕ್ಟರ್ ನಿಲ್ಲುವ » 4ನೇ ಪುಟದಲ್ಲಿ

# ಕನ್ನಡ ರಥ ಎಳೆಯಲು ನಾರಾಯಣಗೌಡಗೆ ಶಕ್ತಿ ತುಂಬಿ

## ಕನ್ನಡ ನಾಡು, ನುಡಿ ರಕ್ಷಣೆಗೆ ಕರವೇ ಕೇಂದ್ರ ಕಚೇರಿ : ಶಂಭುನಾಥ ಸ್ವಾಮೀಜಿ

• ಪ್ರಜೋದಯ ವರದಿ

**ಹಾಸನ:** ಕನ್ನಡ ನಾಡು, ನುಡಿ ಹಾಗು ಸಂಸ್ಕೃತಿಯ ರಕ್ಷಣೆಗಾಗಿ ದೊಡ್ಡ ಕನಸು ಕಂಡಿರುವ ಟಿ.ಎ.ನಾರಾಯಣಗೌಡ ಅವರು ಕರ್ನಾಟಕ ರಕ್ಷಣಾ ವೇದಿಕೆ ಕೇಂದ್ರ ಕಚೇರಿ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಅವರ ಈ ಕಾರ್ಯಕ್ಕೆ ಎಲ್ಲರೂ ಕೈಲಾದ ಸಹಾಯ ಮಾಡುವ ಮೂಲಕ ಆಶೀರ್ವಾದ, ಹಾರೈಕೆ ಹಾಗು ಸಹಕಾರ ನೀಡಬೇಕೆಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಹೇಳಿದರು.

ನಗರದ ಕಲಾಕ್ಷೇತ್ರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಶನಿವಾರ



ಹಮ್ಮಿಕೊಂಡಿದ್ದ ಕನ್ನಡ ಗಾಯ ವೈಭವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕನ್ನಡದ ರಥ ಎಳೆಯುತ್ತಿರುವ ನಾರಾಯಣಗೌಡ ಅವರಿಗೆ ಶಕ್ತಿ ತುಂಬಲು ನಾವೆಲ್ಲ ಆಶೀರ್ವಾದ ಮಾಡಬೇಕಿದೆ. ಅವರ ಕನ್ನಡಪರ ಹೋರಾಟವನ್ನು ಕಣ್ಣಾರೆ ಕಂಡಿದ್ದೇವೆ. ಕರವೇ ಸರ್ವ ಧರ್ಮಗಳ ಸಮನ್ವಯತೆಯೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದು, ನಾಡು, ನುಡಿಯ ಹೋರಾಟ ದಲ್ಲಿ ನಾರಾಯಣಗೌಡ ಅವರು ಮುಂಚೂಣಿಯಲ್ಲಿದ್ದಾರೆ ಎಂದರು.

ಕರವೇ ತನ್ನದೇ ಆದ ಕೇಂದ್ರ ಕಚೇರಿ ನಿರ್ಮಾಣಕ್ಕೆ ಮುಂದಾಗಿದ್ದು, ರಾಜ್ಯದಾದ್ಯಂತ ಕಾರ್ಯಕ್ರಮಗಳನ್ನು ಆಯೋಜಿಸಿ ಸಾರ್ವಜನಿಕರಿಂದ ನೆರವು ಕೋರುತ್ತಿದೆ. ಅದರ ಮೊದಲ ಕಾರ್ಯಕ್ರಮ ಹಾಸನದಲ್ಲಿ ನಡೆಯುತ್ತಿರುವುದು ಸಂತಸದ ಸಂಗತಿ. ಆದಿಚುಂಚನಗಿರಿ ಮಹಾ ಸಂಸ್ಥಾನದ ಬಾಲಗಂಗಾಧರನಾಥ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಶ್ರೀ, ಸುತ್ತೂರು ಶ್ರೀ ಸೇರಿ ಹಲವು ಮಠಾಧೀಶರು ಆಶೀರ್ವಾದ ನೀಡಿದ್ದಾರೆ. ನಾಡು, ನುಡಿ ಹಾಗು ಸಂಸ್ಕೃತಿಯ ಬೆಳವಣಿಗೆಗೆ ಎಲ್ಲರೂ ಕೈಜೋಡಿಸ ಬೇಕೆಂದು ತಿಳಿಸಿದರು.

**ಕನ್ನಡಿಗರ ರಕ್ಷಣೆಗೆ ಕರವೇ ಬದ್ಧ**

ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಅವರು ಮಾತನಾಡಿ, ಕರ್ನಾಟಕ ರಕ್ಷಣಾ ವೇದಿಕೆ ಆರಂಭವಾಗಿ 27 ವರ್ಷಗಳಾಗಿದ್ದು, ಈ ಅವಧಿಯಲ್ಲಿ ರಾಜ್ಯದಲ್ಲಿ ಕನ್ನಡ ಪರ ಜಾಗೃತಿ ಮೂಡಿಸುವ ಮೂಲಕ ಕನ್ನಡ ಕ್ರಾಂತಿಗೆ ನಾಂದಿ ಹಾಡಿದೆ. ಕನ್ನಡ ನಾಡು, ನುಡಿಯನ್ನು ಕಾಪಾಡುವ ಕಾರ್ಯಕ್ಕೆ ಸಂಘಟನೆ ಸದಾ ಸಜ್ಜಾಗಿದೆ ಎಂದರು. » 4ನೇ ಪುಟದಲ್ಲಿ

## ಸಾಹಿತಿ ಎಸ್.ಎಲ್.ಭೈರಪ್ಪ ಏತ ನೀರಾವರಿ ಯೋಜನೆ ಫಲಪ್ರದ | 40 ಹಳ್ಳಿಗಳಲ್ಲಿ ಅಂತರ್ಜಲ ವೃದ್ಧಿ

# ಬರಗಾಲದಲ್ಲಿ ನೀರಿನ ದಾಹ ನೀಗಿಸಿದ ಸಂತೇಶಿವರ ಕೆರೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆ ಮಾತ್ರವಲ್ಲದೆ ರಾಜ್ಯಾದ್ಯಂತ ಈಗ ಕಡು ಬರಗಾಲ ಆವರಿಸಿದ್ದು, ಸಾಹಿತಿ ಎಸ್.ಎಲ್. ಭೈರಪ್ಪನವರ ಊರು ಅದಕ್ಕೆ ತದ್ವಿರುದ್ಧವಾಗಿದೆ.

ಸಂತೇಶಿವರ ಏತ ನೀರಾವರಿ ಯೋಜನೆ ಅನುಷ್ಠಾನದಿಂದ ಹೇಮಾವತಿ ನದಿಯಿಂದ ಅಪಾರ ಪ್ರಮಾಣದಲ್ಲಿ ನೀರು ಹರಿದು ಬಂದಿದ್ದು ಸುತ್ತಲಿನ 40 ಹಳ್ಳಿಗಳಲ್ಲಿ ಅಂತರ್ಜಲ ಮಟ್ಟ ವೃದ್ಧಿಯಾಗಿದೆ. ಒಬ್ಬ ಸಾಹಿತಿ ಕಾಲವಾದ ಬಳಿಕವೂ ಬದುಕಿರುತ್ತಾನೆಂಬುದಕ್ಕೆ ದಿ.ಎಸ್.ಎಲ್. ಭೈರಪ್ಪನವರ ಈ ಯೋಜನೆ ನಿದರ್ಶನವಾಗಿದೆ. ಭೀಕರ ಬರಗಾಲದಿಂದ ಜಾನುವಾರುಗಳ ಕುಡಿಯುವ ನೀರಿಗೂ ಪರದಾಡುವಂತಾಗಿದೆ. ಆದರೆ ಸಂತೇಶಿವರ ಕೆರೆಗೆ ನೀರು ಹರಿದಿರುವುದರಿಂದ ಬೆಳಗುಲಿ, ಹೊಸಕೆರೆಗೆ ಪೈಪ್‌ಲೈನ್ ಮೂಲಕ ನೀರು ಬಿಡಲಾಯಿತು. ಸಂತೇಶಿವರ ಕೆರೆಯಿಂದ ದುಗ್ಗೇನಹಳ್ಳಿ ಕೆರೆಗೆ ನೀರು ಹರಿಸ



ಲಾಗಿದೆ. ಗ್ರಾಮದಿಂದ ದಿಡಗ ವರೆಗೆ ಹಾಗು ತುಮಕೂರಿನ ನೊಣವಿನಕೆರೆ ವರೆಗೆ ಅಂತರ್ಜಲ ಮಟ್ಟ ವೃದ್ಧಿಯಾಗಿದೆ ಎನ್ನುತ್ತಾರೆ ಸ್ಥಳೀಯರು.

**ಭೈರಪ್ಪನವರ ಕನಸಿನ ಕೂಸು**

2019ರ ಅವಧಿಯಲ್ಲಿ ಸಂತೇಶಿವರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಗ್ರಾಮಸ್ಥರು ತಮ್ಮೂರಿನ ಕೆರೆ ತುಂಬಿಸುವಂತೆ ಸರ್ಕಾರದ

### ಇಂದು ಭೈರಪ್ಪ ಪುಣ್ಯ ಸ್ಮರಣೆ

ಕರ್ನಾಟಕ ಮೂಲದ ಭಾರತೀಯ ಲೇಖಕ ಎಂದೇ ಖ್ಯಾತರಾಗಿರುವ ಎಸ್.ಎಲ್.ಭೈರಪ್ಪ ಅವರು ನಿಧನರಾಗಿ ಸೆ.24ಕ್ಕೆ ಒಂದು ವರ್ಷ ಕಳೆದಿದೆ. ಸೆ.27ರ ಭಾನುವಾರ ಸಂತೇಶಿವರದಲ್ಲಿ ಭೈರಪ್ಪನವರ ಪುಣ್ಯ ಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಗಣಪತಿ ಸೇವಾ ಸಮಿತಿಯ ಯುವಕರು ಗಣೇಶ ಮೂರ್ತಿ ವಿಸರ್ಜನೆ ಜೊತೆಗೆ ತೆಪ್ಪದಲ್ಲಿ ಭೈರಪ್ಪನವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಆ ಮೂಲಕ ಹುಟ್ಟೂರಿಗೆ ಶಾಶ್ವತ ನೀರಾವರಿ ಯೋಜನೆ ಕಲ್ಪಿಸಿದ ಮೇರು ಸಾಹಿತಿಯನ್ನು ಸ್ಮರಿಸುತ್ತಿದ್ದಾರೆ.

ಗಮನ ಸೆಳೆಯಲು ಭೈರಪ್ಪ ಅವರಲ್ಲಿ ಮನವಿ ಮಾಡಿದ್ದರು. ಬಳಿಕ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ದಸರಾ ಉದ್ಘಾಟನೆಗೆ ಆಹ್ವಾನಿಸಲು ಭೈರಪ್ಪ ಅವರ ನಿವಾಸಕ್ಕೆ ತೆರಳಿದ್ದ ಸಂದರ್ಭದಲ್ಲಿ ನನ್ನ ಹುಟ್ಟೂರಿನ ಕೆರೆಗೆ ಏತ ನೀರಾವರಿ ಮೂಲಕ ನೀರು ಹರಿಸುವ ಯೋಜನೆಗೆ ಅನುಮತಿ ನೀಡಬೇಕೆಂದು ಕೋರಿದ್ದರು. ಭೈರಪ್ಪ ಅವರ ಮನವಿಯನ್ನು ಗಂಭೀರವಾಗಿ ಪರಿಗಣಿಸಿದ ಯಡಿಯೂರಪ್ಪ ಅವರು ಬಜೆಟ್‌ನಲ್ಲಿ ಯೋಜನೆಗೆ 25 ಕೋ.ರೂ. ಅನುದಾನ ಘೋಷಿಸಿದರು.

ಅನುದಾನ ಘೋಷಣೆಯಾದ ಕೂಡಲೇ ಯೋಜನೆ ಪೂರ್ಣಗೊಂಡಿರಲಿಲ್ಲ. ಹಲವು ತಾಂತ್ರಿಕ ಹಾಗು ಆಡಳಿತಾತ್ಮಕ ಕಾರಣಗಳಿಂದ ಕಾಮಗಾರಿ ವಿಳಂಬವಾಗಿತ್ತು. ಈ ಹಿನ್ನಲೆಯಲ್ಲಿ ಭೈರಪ್ಪ ಅವರು ಸಂಬಂಧಿಸಿದ ಇಲಾಖೆಗಳು ಹಾಗು ಸರ್ಕಾರಕ್ಕೆ ಹಲವು ಪತ್ರಗಳನ್ನು ಬರೆದು ಯೋಜನೆಗೆ ವೇಗ ನೀಡುವಂತೆ ಒತ್ತಾಯಿಸಿದ್ದರು. » 4ನೇ ಪುಟದಲ್ಲಿ

CMYK CMYK CMYK CMYK

# ಹಾನುಬಾಳ್‌ನಲ್ಲಿ ಪ್ರಜಾ ಸೇವೆ ಆಂದೋಲನ: ಸ್ಥಳದಲ್ಲೇ ಸಮಸ್ಯೆ ಪರಿಹಾರ

**100ಕ್ಕೂ ಅಧಿಕ ಅರ್ಜಿ ಸ್ವೀಕಾರ | ಶಾಸಕ ಸಿಮೆಂಟ್ ಮಂಜು ಮಾಹಿತಿ**

• ಪ್ರಜೋದಯ ವರದಿ



**ಸಕಲೇಶಪುರ:** ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ಉದ್ದೇಶದಿಂದ ಹೋಬಳಿ ಮಟ್ಟದಲ್ಲಿ ಪ್ರಜಾ ಸೇವಾ ಆಂದೋಲನ ನಡೆಸಲಾಗುತ್ತಿದ್ದು, ಹಾನುಬಾಳು ಹೋಬಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ಅರ್ಜಿ ಸ್ವೀಕರಿಸಿ ಸಾಧ್ಯವಿರುವ ಹಲವು ಸಮಸ್ಯೆಗಳನ್ನು ಸ್ಥಳದಲ್ಲೇ ವಿಲೇವಾರಿ ಮಾಡಲಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕಿನ ಹಾನುಬಾಳು ಹೋಬಳಿ ವ್ಯಾಪ್ತಿಯಲ್ಲಿ ಶನಿವಾರ ನಡೆದ ಪ್ರಜಾಸೇವಾ ಆಂದೋಲನದ ಅಧ್ಯಕ್ಷತೆ ವಹಿಸಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಂದಾಯ, ಗ್ರಾಮ ಪಂಚಾಯಿತಿ, ಭೂಮಾಪನ ಸೇರಿ ವಿವಿಧ ಇಲಾಖೆ ಗಳಿಗೆ ಸಂಬಂಧಿಸಿ ನೂರಕ್ಕೂ ಹೆಚ್ಚು ಅರ್ಜಿಗಳು ಬಂದಿವೆ. ತಕ್ಷಣ ಪರಿಹರಿಸಲು ಸಾಧ್ಯವಿರುವ ಸಮಸ್ಯೆಗಳನ್ನು ಇತ್ಯರ್ಥಪಡಿಸಲಾಗಿದೆ. ಕಾಲಾವಕಾಶ ಅಗತ್ಯವಿರುವ ಅರ್ಜಿಗಳಿಗೆ ನಿರ್ದಿಷ್ಟ ಗಡುವು ನಿಗದಿಪಡಿಸಿ ಆ ಅವಧಿಯೊಳಗೆ ಕೆಲಸ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ತಾಂತ್ರಿಕ ಹಾಗು ನಿಯಮಾತ್ಮಕ ಕಾರಣಗಳಿಂದ ಪರಿಹರಿಸಲು ಸಾಧ್ಯವಾಗದ ಕೆಲವು ಸಮಸ್ಯೆಗಳ ಕುರಿತು ಅರ್ಜಿದಾರರಿಗೆ ವಾಸ್ತವಾಂಶವನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಆದರೆ, ನಿಯಮಾನುಸಾರ ಮಾಡಬಹುದಾದ ಕೆಲಸಗಳನ್ನು ಅನಗತ್ಯವಾಗಿ ವಿಳಂಬ ಮಾಡಬಾರದು. ಸಾರ್ವಜನಿಕರು ಒಂದೇ ಕೆಲಸಕ್ಕಾಗಿ ಸರ್ಕಾರಿ ಕಚೇರಿಗಳಿಗೆ ಪದೇ ಪದೇ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಬಾರದೆಂದು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಲಾಗಿದೆ ಎಂದರು.

**ನಾಡಕಚೇರಿಯಲ್ಲಿ ವಾರಕ್ಕೆ ನಾಲ್ಕು ದಿನ ಸೇವೆ**

ಹಾನುಬಾಳು ನಾಡಕಚೇರಿಯ ಅಧಿಕಾರಿಯೊಬ್ಬರಿಗೆ ಎರಡು ಕಡೆ ಕರ್ತವ್ಯದ ಜವಾಬ್ದಾರಿ ಇರುವುದರಿಂದ ಸಾರ್ವಜನಿಕರಿಗೆ ಸಮರ್ಪಕ ಸೇವೆ ದೊರೆಯುತ್ತಿಲ್ಲವೆಂಬ ದೂರುಗಳು ಕೇಳಿ ಬಂದಿವೆ. ಈ ಹಿನ್ನಲೆಯಲ್ಲಿ ವಾರದಲ್ಲಿ ಕನಿಷ್ಟ ನಾಲ್ಕು ದಿನ ಹಾನುಬಾಳಿನಲ್ಲಿಯೇ ಇದ್ದು ಸಾರ್ವ ಜನಿಕರಿಗೆ ಸೇವೆ ನೀಡುವಂತೆ ಸೂಚಿಸಲಾಗಿದೆಯೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

**ಸರ್ವೆಯರ್‌ಗಳಿಗೆ ಎಚ್ಚರಿಕೆ**

ಭೂಮಾಪನ ಇಲಾಖೆಗೆ ಸಂಬಂಧಿಸಿದ ದೂರುಗಳ ಕುರಿತು ಪ್ರತಿಕ್ರಿಯಿಸಿದ ಅವರು, ಹಿಂದಿನ ಪ್ರಕರಣಗಳಲ್ಲಿ ಲೋಪ ಎಸಗಿದವರ ವಿರುದ್ಧ ಜಿಲ್ಲಾಧಿಕಾರಿ ಕ್ರಮ ಕೈಗೊಂಡಿದ್ದು, ಇಬ್ಬರು ಸರ್ವೆಯರ್‌ಗಳನ್ನು ಅಮಾನತುಗೊಳಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಕೆಲವು ಅರ್ಜಿಗಳು ಪ್ರಜಾಸೇವಾ ಕಾರ್ಯಕ್ರಮದಲ್ಲಿಯೂ ಬಂದಿವೆ ಎಂದರು.

ಮುಂದಿನ ದಿನಗಳಲ್ಲಿ ಭೂಮಾಪನ ಕಾರ್ಯದಲ್ಲಿ ಯಾವುದೇ ಲೋಪ ಉಂಟಾಗಬಾರದು. ಸಾರ್ವಜನಿಕರಿಗೆ ತೊಂದರೆಯಾಗುವ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಿ, ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಂಡು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುವಂತೆ ಸಂಬಂಧಪಟ್ಟ ಸಿಬ್ಬಂದಿಗೆ ಸೂಚಿಸಲಾಗಿದೆ ಎಂದು ಹೇಳಿದರು.

**ರೀಲ್ಸ್ ನೋಡಿದ ಸಿಬ್ಬಂದಿಗೆ ತರಾಟೆ**

ಸಭೆ ನಡೆಯುತ್ತಿದ್ದ ವೇಳೆ ಕೆಲ ಸರ್ಕಾರಿ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಮೊಬೈಲ್‌ನಲ್ಲಿ ರೀಲ್ಸ್ ವೀಕ್ಷಿಸುತ್ತಿದ್ದ ಕುರಿತು ಪ್ರತಿಕ್ರಿಯಿಸಿದ ಶಾಸಕ ಸಿಮೆಂಟ್ ಮಂಜು, ಸಭೆಗೆ ಹಾಜರಾಗುವ ಅಧಿಕಾರಿ ಮತ್ತು ಸಿಬ್ಬಂದಿ ಸಾರ್ವಜನಿಕರ ಸಮಸ್ಯೆಗಳ ಚರ್ಚೆಯತ್ತ ಸಂಪೂರ್ಣ ಗಮನ ಹರಿಸಬೇಕೆಂದು ತಾಕೀತು ಮಾಡಲಾಗಿದೆ ಎಂದರು.

ಒಂದು ಇಲಾಖೆಯ ಸಮಸ್ಯೆ ಮತ್ತೊಂದು ಇಲಾಖೆಯೊಂದಿಗೆ ಸಂಬಂಧ ಹೊಂದಿರಬಹುದು. ಕಂದಾಯ ಇಲಾಖೆಯ ವಿಷಯದಲ್ಲಿ ಗ್ರಾಮ ಪಂಚಾಯಿತಿ ಪಿಡಿಒ ಸೇರಿ ಇತರ ಅಧಿಕಾರಿಗಳ ಪಾತ್ರವೂ ಇರಬಹುದು. ಹೀಗಾಗಿ ಸಭೆಯಲ್ಲಿ ಮೊಬೈಲ್‌ನಲ್ಲಿ ಕಾಲ ಕಳೆಯದೆ, ಸಾರ್ವಜನಿಕರ ಸಮಸ್ಯೆ ಹಾಗೂ ಅದರ ಪರಿಹಾರದತ್ತ ಅಧಿಕಾರಿಗಳು ಗಮನ ಹರಿಸಬೇಕೆಂದು ಸೂಚಿಸಲಾಗಿದೆ ಎಂದರು.

ಪ್ರಜಾಸೇವಾ ಆಂದೋಲನದ ಮುಖ್ಯ ಉದ್ದೇಶವೇ ಸಾರ್ವಜನಿಕರು ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಅವರ ಸಮಸ್ಯೆಗಳಿಗೆ ಸಾಧ್ಯವಾದಷ್ಟು ಸ್ಥಳದಲ್ಲೇ ಪರಿಹಾರ ಕಲ್ಪಿಸು ವುದು. ಅಧಿಕಾರಿಗಳು ಜನರಿಗೆ ತೊಂದರೆಯಾಗದಂತೆ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

**ಶುಲ್ಕ ಸಹಿತ ಚಾರಣಕ್ಕೆ ಅವಕಾಶ ನೀಡಿ**

ತಾಲ್ಲೂಕು ಹೋಂ ಸ್ಟೇ ಮಾಲೀಕರ ಸಂಘದ ಮಾಜಿ ಅಧ್ಯಕ್ಷ ಕುಮಾರಸ್ವಾಮಿ ಅವರು ಮಾತನಾಡಿ, ಹಾನುಬಾಳು ಭಾಗವು ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶಗಳನ್ನು ಹೊಂದಿದೆ. ಬೆಟ್ಟದ ಭೈರವೇಶ್ವರ, ಅಬ್ಬಿ ಫಾಲ್ಸ್, ಮೂರು ಕಣ್ಣು ಗುಡ್ಡ, ಅಗ್ನಿಗುಡ್ಡ ಸೇರಿ ಹಲವು ನೈಸರ್ಗಿಕ ಪ್ರವಾಸಿ ತಾಣಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ ಎಂದರು.

ಈ ಪ್ರದೇಶಗಳಲ್ಲಿ ನಿಯಮಬದ್ಧವಾಗಿ ಚಾರಣಕ್ಕೆ ಅವಕಾಶ ಕಲ್ಪಿಸಬೇಕು. ನಿಗದಿತ ಶುಲ್ಕ ವಿಧಿಸಿ ಪ್ರವಾಸಿಗರಿಗೆ ಚಾರಣಕ್ಕೆ ಅವಕಾಶ ನೀಡುವುದರಿಂದ ಸರ್ಕಾರಕ್ಕೆ ಆದಾಯವೂ ದೊರೆ ಯಲಿದೆ. ಆ ಆದಾಯವನ್ನು ಇದೇ ಪ್ರವಾಸಿ ತಾಣಗಳಲ್ಲಿ ಕುಡಿಯುವ ನೀರು, ಶೌಚಗೃಹ, ರಸ್ತೆ, ಪಾರ್ಕಿಂಗ್ ಹಾಗು ಇತರ ಮೂಲಸೌಕರ್ಯಗಳ ಅಭಿವೃದ್ಧಿಗೆ ಬಳಸಬಹುದು. ಅದರಿಂದ ಪ್ರವಾಸೋದ್ಯಮಕ್ಕೂ ಉತ್ತೇಜನ ದೊರೆಯಲಿದೆ ಎಂದು ಸಲಹೆ ನೀಡಿದರು.

ತಹಶೀಲ್ದಾರ್‌ಕೆ.ಎಸ್.ಸುಪ್ರಿತಾ, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಜಿ.ಡಿ.ಗಂಗಾಧರನ್,ಭೂದಾಖಲೆಗಳ ಸಹಾಯಕ ನಿರ್ದೇಶಕ ಕೀರ್ತಿ ಸಿಂಹ ಉಪಸ್ಥಿತರಿದ್ದರು.

# ಹಾಸನಾಂಬ ದರ್ಶನೋತ್ಸವಕ್ಕೆ ಕಲಾವೈಭವದ ಮೆರುಗು

» ಮೊದಲನೇ ಪುಟದಿಂದ

ಈ ಬಾರಿ ಜಿಲ್ಲೆಯಲ್ಲಿ ಸಾಕಿರುವ ಉತ್ತಮ ತಳಿಯ ಹೋರಿಗಳನ್ನು ತರಿಸಿ ಪ್ರದರ್ಶನ ಏರ್ಪಡಿಸಲಾಗು ವುದು. ಉತ್ತಮ ಹೋರಿಗಳಿಗೆ ಬಹು ಮಾನ ನೀಡುವ ವ್ಯವಸ್ಥೆ ಮಾಡಲಾ ಗುವುದು. ಟಗರು ಪ್ರದರ್ಶನ, ಎತ್ತಿನ ಗಾಡಿ ಓಟ, ಸೋಬಾನೆ ಪದಗಳ ಗಾಯನ, ರಂಗಗೀತೆಗಳು ಸೇರಿ ಗ್ರಾಮೀಣ ಬದುಕನ್ನು ಬಿಂಬಿಸುವ ಕಾರ್ಯಕ್ರಮ ಆಯೋಜಿಸುವ ಉದ್ದೇಶವಿದೆ ಎಂದರು.

ರಾಜ್ಯ ಹಾಗು ಜಿಲ್ಲಾ ಮಟ್ಟದ ಕ್ರಿಕೆಟ್ ಸೇರಿ ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ವರಿಗೆ ಸ್ಮರಣಿಕೆ ನೀಡುವ ವ್ಯವಸ್ಥೆ ಮಾಡಲಾಗು ವುದು. ರಂಗೋಲಿ ಸ್ಪರ್ಧೆ, ಸಾಂಸ್ಕೃತಿಕ ಚಟುವಟಿಕೆಗಳಿಗೂ ಅವಕಾಶ ಕಲ್ಪಿಸಲಾಗು ವುದು. ಹಾಸನಾಂಬ ಉತ್ಸವ ವನ್ನು ಜನರ ಪಾಲ್ಗೊಳ್ಳುವಿಕೆ ಯಿಂದ ದೊಡ್ಡ ಹಬ್ಬವನ್ನಾಗಿ ರೂಪಿಸುವುದು ನಮ್ಮ ಆಶಯವಾಗಿದೆ ಎಂದು ಹೇಳಿದರು.

**ಪಾಸ್‌ಗಳ ಸಂತೆಯಾಗದಿರಲಿ**

ಉತ್ಸವದ ನಿರ್ವಹಣೆಗಾಗಿ ಈಗಾಗಲೇ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಇನ್ನಷ್ಟು ಸಮಿತಿಗಳನ್ನು ರಚಿಸಿ ಜಿಲ್ಲಾಡಳಿತ, ಸಾರ್ವ ಜನಿಕರು ಹಾಗು ಭಕ್ತರು ಒಟ್ಟಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಜಿಲ್ಲೆಗೆ ಉತ್ತಮ ಹೆಸರು ತಂದುಕೊಡಲು ಸಾಧ್ಯವಾಗಲಿದೆ. ಪಾಸ್‌ಗಳ ಸಂಖ್ಯೆ ಹೆಚ್ಚಾಗದಂತೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಉತ್ಸವವು ಪಾಸ್‌ಗಳ ಸಂತೆಯಾಗದೆ ಸಾರ್ವಜನಿಕರ ಹಬ್ಬವಾಗ ಬೇಕು. ಕಳೆದ ಬಾರಿಗಿಂತ ಈ ಬಾರಿ ಇನ್ನಷ್ಟು ಬಿಗಿಯಾದ ವ್ಯವಸ್ಥೆ ಮಾಡಲಾಗು ವುದು. ಶಿಷ್ಟಾಚಾರ ಪಾಲನೆಯ ಜೊತೆಗೆ ವಿವಿಐಪಿ ಸಂಸ್ಕೃತಿಗೆ ಕಡಿ ವಾಣ ಹಾಕಲಾಗುವುದು. ರಾಜಕೀಯ ಒತ್ತಡಕ್ಕೆ ಮಣಿಯದೆ ಜನ ಸಾಮಾನ್ಯರಿಗೆ ಮೊದಲ ಆದ್ಯತೆ ನೀಡಲಾಗು ವುದು. ಯಾರೇ ಮುನಿಸಿ ಕೊಂಡು ಹೋದರೂ ಜನರ ಅನುಕೂಲಕ್ಕೆ ಆದ್ಯತೆ ನೀಡುವ ನಿರ್ಧಾರದಲ್ಲಿ ಬದಲಾವಣೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಈ ಬಾರಿ ದಸರಾ ಮಾದರಿಯಲ್ಲಿ ನಗರದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗುವುದು. ಪ್ರವಾಸಿಗರ ಅನುಕೂಲಕ್ಕಾಗಿ ಹೆಲಿಟೂರಿಸಂ ವ್ಯವಸ್ಥೆಯನ್ನೂ ಕಲ್ಪಿಸುವ ಉದ್ದೇಶವಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಡಿಎಫ್‌ಒ ಸೌರಭ್ ಕುಮಾರ್, ಜಿಲ್ಲಾ ಪಂಚಾಯಿತಿ ಸಿಇಒ ಶುಭಂ ಶುಕ್ಲಾ, ಎಡಿಸಿ ಕೃಷ್ಣ ಮೂರ್ತಿ, ಎಸಿ ಜಗದೀಶ್ ಗಂಗಣ್ಣನವರ್ ಇತರರು ಇದ್ದರು.

## ಹೇಮಾವತಿ ಸಕ್ಕರೆ ಕಾರ್ಖಾನೆ ಷೇರುದಾರರಿಗೆ ತಲಾ 30 ಕೆ.ಜಿ. ಸಕ್ಕರೆ

» ಮೊದಲನೇ ಪುಟದಿಂದ

ಯಾರ್ಡ್ ಸಂಪೂರ್ಣ ಹಾಳಾಗಿದೆ. ಅದರಿಂದ ರೈತರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಆಡಳಿತ ಮಂಡಳಿ ಗಮನ ಹರಿಸಿಲ್ಲ ಎಂದು ಸಭೆ ಗಮನಕ್ಕೆ ತಂದರು.

ಶಾಸಕ ಬಾಲಕೃಷ್ಣ ಅವರು ಉತ್ತರಿಸಿ, ಗ್ರಾಮ ಪಂಚಾಯಿತಿಯಿಂದ ಒಂದು ತಿಂಗಳೊಳಗೆ ಕಾರ್ಖಾನೆ ಮುಂಭಾಗದ ಹೆದ್ದಾರಿಗೆ ಬೀದಿ ದೀಪ ಅಳವಡಿಸಲಾಗುವುದು. ಯಾರ್ಡ್ ರಿಪೇರಿಗೆ 45 ಲ.ರೂ. ಮೀಸಲಿಡಲಾಗಿದೆ ಎಂದರು.

ಆಡಳಿತ ಮಂಡಳಿ ಅಧ್ಯಕ್ಷ ಜಯರಾಂ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಖಾನೆ ನಿರ್ದೇಶಕರಾದ ಬಿ.ಸಿ.ಮಂಜುನಾಥ್, ನಾರಾಯಣ ಗೌಡ, ತೇಜಸ್ವಿ ಕಿರಣ್, ಜಯರಾಂ, ದೇವೇಗೌಡ, ಶಿವಣ್ಣ, ರವೀಶ್, ಯೋಗಾ ನಂಜುಂಡ, ರಾಜೇಗೌಡ, ನಾರಾಯಣ, ಭಾರತಿ, ಎಂ.ಆರ್. ಮಂಜುನಾಥ್, ಭಾರತಿ, ಲಕ್ಷ್ಮೀದೇವಿ, ರವಿ ಹಾಗು ಇತರರಿದ್ದರು.

## ಬರಗಾಲದಲ್ಲಿ ನೀರಿನ ದಾಹ ನೀಗಿಸಿದ ಸಂತೇಶಿವರ ಕೆರೆ

» ಮೊದಲನೇ ಪುಟದಿಂದ

ನಂತರ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಯೋಜನೆಗೆ ಮತ್ತೆ 25 ಕೋ.ರೂ. ಮೀಸಲಿಡಲಾಯಿತು. ಬಳಿಕ ಸರ್ಕಾರದ ಕ್ರಮಗಳೊಂದಿಗೆ ಯೋಜನೆ ಕಾರ್ಯರೂಪಕ್ಕೆ ಬಂದು ಕಾಮಗಾರಿ ಪೂರ್ಣ ಗೊಂಡಿತು. 2025ರ ಮಾರ್ಚ್ ವೇಳೆಗೆ ಸಂತೇಶಿವರ ಕೆರೆಗೆ ನೀರು ಹರಿಯು ವಂತಾಯಿತು.

**9 ಕಿ.ಮೀ. ಪೈಪ್‌ಲೈನ್ ಮೂಲಕ ನೀರು**

ಜಾಬಘಟ್ಟದ ಸಮೀಪ ಜಾಕ್‌ವೆಲ್ ನಿರ್ಮಿಸಿ ಸುಮಾರು 9 ಕಿ.ಮೀ. ಪೈಪ್‌ಲೈನ್ ಮೂಲಕ ಹಾಗು ಮತ್ತಷ್ಟು ದೂರ ಕಾಲುವೆ ಮೂಲಕ ಸಂತೇಶಿವರಕ್ಕೆ ನೀರು ತರುವ ವ್ಯವಸ್ಥೆ ಮಾಡಲಾಗಿದೆ. ಯೋಜನೆ ಸಾಕಾರಗೊಳ್ಳುವ ಹಾದಿಯಲ್ಲಿ ಭೂಸ್ವಾಧೀನ ಸೇರಿ ಕೆಲವು ಸ್ಥಳೀಯ ಅಡ ಚಣೆಗಳೂ ಎದುರಾಗಿದ್ದವು. ಅವುಗಳ ನಿವಾರಣೆಯಲ್ಲೂ ಶಾಸಕಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ನಿರಂತರ ಪ್ರಯತ್ನ ನಡೆಸಿದರು.

**40ಕ್ಕೂ ಹೆಚ್ಚು ಗ್ರಾಮಗಳಿಗೆ ಅನುಕೂಲ**

ಸಂತೇಶಿವರ ಹಾಗು ಅಗ್ರಹಾರ ಬೆಳಗುಲಿ ಕೆರೆಗಳಿಗೆ ನೀರು ಪೂರೈಕೆಯಾಗುವುದರಿಂದ ಸುತ್ತಮುತ್ತಲಿನ 40ಕ್ಕೂ ಹೆಚ್ಚು ಗ್ರಾಮಗಳ ಅಂತರ್ಜಲ ಮಟ್ಟ ಸುಧಾರಿಸಲು ನೆರವಾಗಿದೆ. ಸಾವಿರಾರು ಕೊಳವೆ ಬಾವಿಗಳಿಗೆ ಮರುಪೂರಣದ ಅವಕಾಶ ಸೃಷ್ಟಿಯಾಗಿ ರೈತ ಸಮುದಾಯಕ್ಕೆ ಅನುಕೂಲವಾಗಿದೆ.

**ಸಂತೇಶಿವರಕ್ಕೆ ಶಾಶ್ವತ ಕೀರ್ತಿ**

ತಾವು ಹುಟ್ಟಿದ ಸಂತೇಶಿವರದ ಬದುಕು, ಅಲ್ಲಿನ ಜನಜೀವನ ಹಾಗು ಗ್ರಾಮೀಣ ಪರಿಸರದ ಅನುಭವಗಳು ಭೈರಪ್ಪ ಅವರ ಸಾಹಿತ್ಯಿಕ ಚಿಂತನೆಗೆ ಮಹತ್ವದ ಹಿನ್ನಲೆಯಾದವು. ಸಾಮಾನ್ಯ ಗ್ರಾಮೀಣ ಬದುಕಿನಿಂದ ಹೊರಹೊಮ್ಮಿ, ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಅವರ ಸಾಧನೆ ಚನ್ನರಾಯಪಟ್ಟಣ ತಾಲ್ಲೂಕಿನ ಜನತೆಗೆ ಹೆಮ್ಮೆಯ ಸಂಗತಿಯಾಗಿದೆ.

## ಕನ್ನಡ ರಥ ಎಳೆಯಲು ನಾರಾಯಣಗೌಡಗೆ ಶಕ್ತಿ ತುಂಬಿ

» ಮೊದಲನೇ ಪುಟದಿಂದ



ಕರವೇ ಉದಯವಾಗದಿದ್ದರೆ ರಾಜ್ಯದ ಪರಿಸ್ಥಿತಿ ಹೇಗಿರುತ್ತಿತ್ತು ಎಂಬುದನ್ನು ಊಹಿಸುವುದೂ ಕಷ್ಟ. ಗಡಿ ಭಾಗಗಳಲ್ಲಿ ಹಾಗು ವಲಸಿಗರ ನಡುವೆ ಕನ್ನಡಿಗರ ಸ್ಥಿತಿ ಏನಾಗುತ್ತಿತ್ತು ಎಂಬುದನ್ನು ಹೇಳಲಾಗದು. ಇಂತಹ ಸಂದರ್ಭದಲ್ಲಿ ಕನ್ನಡಿಗರ ಹಿತಾಸಕ್ತಿ ಮತ್ತು ರಕ್ಷಣೆಗೆ ಕರವೇ ನಿರಂತರವಾಗಿ ಶ್ರಮಿಸುತ್ತಿದೆಂದು ಹೇಳಿದರು.

ಕರ್ನಾಟಕದಲ್ಲಿ ಕನ್ನಡಿಗರೇ ಸಾರ್ವ ಭೌಮರು ಎಂಬ ಆಶಯವನ್ನು ಕರವೇ ಸಾರು ತ್ತಿದೆ. ಯಾವುದೇ ಪಕ್ಷ ಅಥವಾ ಸರ್ಕಾರ ದೊಂದಿಗೆ ರಾಜಿ ಮಾಡಿಕೊಳ್ಳದೆ ನಾಡು ಕಟ್ಟುವ ಕೆಲಸ ಮಾಡುತ್ತಿದೆ. ಕನ್ನಡ ಭಾಷೆ, ನೆಲ ಮತ್ತು ಸಂಸ್ಕೃತಿಯ ರಕ್ಷಣೆಗೆ ಸಂಘಟನೆ ಬದ್ಧವಾಗಿದೆ. ಕರವೇ ಕೇಂದ್ರ ಕಚೇರಿ ನಿರ್ಮಾಣಕ್ಕಾಗಿ ಸುಮಾರು 20 ರಿಂದ 22 ಕೋಟಿ ರೂ. ವೆಚ್ಚದ ಯೋಜನೆ ರೂಪಿಸಲಾಗಿದೆ. ಕಟ್ಟಡದಲ್ಲಿ ಕಚೇರಿ, ಊಟ ಮತ್ತು ವಸತಿ ವ್ಯವಸ್ಥೆ ಹಾಗು ವೇದಿಕೆ ನಿರ್ಮಿಸುವ ಉದ್ದೇಶವಿದೆ. ಈ ಕಾರ್ಯಕ್ಕೆ ಸಾರ್ವಜನಿಕರ ನೆರವು ಪಡೆಯಲು ರಾಜ್ಯದ 31 ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ, ಶಾಸಕ ಹೆಚ್.ಪಿ.ಸ್ವರೂಪ್, ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಪ್ರಮುಖರಾದ ಲಕ್ಷ್ಮೀ ಕಾಂತ್, ಅಬ್ದುಲ್ ಬಷೀರ್, ಮನುಕುಮಾರ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

**ಕರ್ನಾಟಕ ಸಾರ್ವಭೌಮ ಪ್ರಶಸ್ತಿ ಪ್ರದಾನ**

ಪ್ರಜೋದಯ ಪತ್ರಿಕೆ ಸಂಪಾದಕ ಹಾಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ಪ್ರಗತಿಪರ ಕೃಷಿಕ ಡಾ.ಎಂ.ಸಿ.ರಂಗಸ್ವಾಮಿ, ಬಿ.ಪಿ.ಕೃಷ್ಣೇಗೌಡ, ಡಾ.ಎನ್.ಆರ್.ಪುರುಷೋತ್ತಮ್, ಜಗದೀಶ್ ಕಬ್ಬಿನಹಳ್ಳಿ, ಡಾ.ವಿನಾಯಕ, ಎಸ್.ಎಚ್. ರಾಜಶೇಖರ್, ಆರ್.ಎಲ್.ದೇವರಾಜು, ಹೆಚ್. ಜೆ.ಕಾಂಚನ ಮಾಲ, ಸೈಯದ್ ಸಜ್ಜಾದ್ ಪಾಷಾ ಹಾಗು ಪರಶುರಾಮ್ ಅವರಿಗೆ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಕರ್ನಾಟಕ ಸಾರ್ವಭೌಮ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಕಾಂಗ್ರೆಸ್ ವಿರುದ್ಧ ಸಮರಕ್ಕೆ ಮೈತ್ರಿ ಸಜ್ಜು

» ಮೊದಲನೇ ಪುಟದಿಂದ

ಡಿ.ಕೆ.ಶಿವಕುಮಾರ್ ಒಂದಾಗುತ್ತಾರೆ. ಡಿ.ಕೆ.ಶಿವಕುಮಾರ್ ಹಣದ ರಾಜಕಾರಣ ಮಾಡೋದು ನಿಶ್ಚಿತ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಮೌನವಾಗಿದ್ದಾರೆ, ಚುನಾವಣೆ ವೇಳೆ ಸಿದ್ದರಾಮಯ್ಯ ಸಕ್ರಿಯವಾಗಿ ಕೆಲಸ ಮಾಡುತ್ತಾರೆ. ಸಿದ್ದರಾಮಯ್ಯಗೆ ಮಗನ ಭವಿಷ್ಯದ ಬಗ್ಗೆ ಯೋಚನೆ ಇದೆ, ಸಿದ್ದರಾಮಯ್ಯ ಮೌನ ತಾತ್ಕಾಲಿಕ, ಹೀಗಾಗಿಯೇ ಕಾಂಗ್ರೆಸ್ ಸೋಲಿಸಲು ಬಿಜೆಪಿ, ಜೆಡಿಎಸ್ ಹೋರಾಟ ಮಾಡಬೇಕೆಂದು ಹೇಳಿದರು.

ಸಭೆಯಲ್ಲಿ ಕೇಂದ್ರದ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ಶಾಸಕಾಂಗ ನಾಯಕ ಸುರೇಶ್ ಬಾಬು, ಬೋಜೇಗೌಡ, ಮುಖಂಡರಾದ ನಿಖಿಲ್ ಕುಮಾರಸ್ವಾಮಿ, ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ ಸೇರಿ ಶಾಸಕರು, ವಿಧಾನ ಪರಿಷತ್ತಿನ ಸದಸ್ಯರು, ಎರಡೂ ಪಕ್ಷಗಳ ಪದಾಧಿಕಾರಿಗಳು, ಮುಖಂಡರು ಹಾಗು ಕಾರ್ಯಕರ್ತರು ಭಾಗವಹಿಸಿದ್ದರು.

## ಪಡಿತರಕ್ಕಾಗಿ ಸಹೋದರರ ಗಲಾಟೆ

• ಪ್ರಜೋದಯ ವರದಿ

**ಬೇಲೂರು:** ನ್ಯಾಯಬೆಲೆ ಅಂಗಡಿ ಯಲ್ಲಿ ರೇಷನ್ ಪಡೆಯುವ ವಿಚಾರ ವಾಗಿ ಅಣ್ಣನು ತನ್ನ ತಮ್ಮನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಸೋಮಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಘು ಎಂಬುವವರ ಮೇಲೆ ಸಹೋದರ ದೇವರಾಜ್ ಹಲ್ಲೆ ನಡೆಸಿದ್ದಾನೆ ಎನ್ನಲಾಗಿದೆ. ರಘು ಹಾಗು ಆತನ ತಾಯಿ ವೆಂಕಟಮ್ಮ ಒಂದು ಮನೆಯಲ್ಲಿ ದ್ದರೆ ದೇವರಾಜ್ ತನ್ನ ಹೆಂಡತಿ ಗೀತಾ ಜೊತೆಗೆ ಪ್ರತ್ಯೇಕವಾಗಿ ದ್ದಾನೆ. ವೆಂಕಟಮ್ಮ ಅವರು ರೇಷನ್ ತರಲೆಂದು ಪುತ್ರ ರಘು ಅವರನ್ನು ಬಂಟೇನಹಳ್ಳಿ ನ್ಯಾಯಬೆಲೆ ಅಂಗಡಿಗೆ ಕಳುಹಿಸಿದಾಗ ಅಷ್ಟರಲ್ಲಾಗಲೇ ಗೀತಾ ಅವರು ಪಡಿತರ ಪಡೆದಿದ್ದಾರೆಂದು ಸಿಬ್ಬಂದಿ ಹೇಳಿದ್ದಾರೆ. ಅದರಿಂದ ಆಕ್ರೋಶಗೊಂಡ ವೆಂಕಟಮ್ಮ ಹಾಗು ರಘು ನ್ಯಾಯ ಕೇಳಲೆಂದು ದೇವರಾಜ್‌ನ ಮನೆಗೆ ಹೋದಾಗ ಗಲಾಟೆ ನಡೆದಿದೆ.

ಸಹೋದರರ ನಡುವಿನ ವಾಗ್ವಾದ ತಾರಕಕ್ಕೇರಿದ್ದು ಚಾಕುವಿನಿಂದ ದೇವರಾಜ್‌ನು ರಘು ಅವರ ಎಡಪಕ್ಕೆಗೆ ಇರಿದಿದ್ದಾನೆ. ಗಂಭೀರ ಗಾಯಗೊಂಡ ರಘು ಅವರನ್ನು ತಕ್ಷಣವೇ ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆಧ್ಯಾತ್ಮಿಕತೆಯಿಂದ ನೆಮ್ಮದಿ ಸಾಧ್ಯ

» ಮೊದಲನೇ ಪುಟದಿಂದ

ಚಟುವಟಿಕೆಗಳಲ್ಲಿ ತೊಡಗಬಾರದು, ಸುಳ್ಳು ಹೇಳಬಾರದು ಹಾಗು ದುಶ್ಚಟಗಳಿಂದ ದೂರ ವಿರಬೇಕು ಎಂಬ ನೈತಿಕ ಮೌಲ್ಯಗಳನ್ನು ಬೋಧಿಸಿದರು. ಪ್ರಕೃತಿಗೆ ಯಾವುದೇ ಧರ್ಮ ವಿಲ್ಲ. ಮಳೆ, ಗಾಳಿ ಎಲ್ಲರಿಗೂ ಸಮಾನವಾಗಿದ್ದು, ಧರ್ಮವೂ ಪ್ರಕೃತಿದತ್ತವಾದುದು ಎಂಬ ಸಂದೇಶವನ್ನು ಬುದ್ಧರು ನೀಡಿದ್ದಾರೆಂದರು.

ವೃದ್ಧಾಪ್ಯ, ರೋಗ ಮತ್ತು ಸಾವುಗಳಿಂದ ಯಾರಿಗೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ದುಃಖ ಮನುಷ್ಯನ ಬದುಕಿನ ಭಾಗವಾಗಿದೆ. ಬಸವಾದಿ ಶರಣರ ವಚನಗಳು ಸಹ ಸಮಾಜ ದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಕಾರಣವಾಗಿವೆ. ಭಾರತ ಬಹುತ್ವದ ನೆಲೆಯಲ್ಲಿ ಮುನ್ನಡೆ ಯುತ್ತಿದ್ದು, ಬುದ್ಧರ ಚಿಂತನೆಗಳಲ್ಲಿ ದೇವರಿಗಿಂತ ಮನುಷ್ಯ ಮತ್ತು ನೈತಿಕ ಬದುಕಿಗೆ ಹೆಚ್ಚಿನ ಮಹತ್ವವಿದೆ. ದೇಶದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಕಾಶ ಕಲ್ಪಿಸುವಲ್ಲಿ ಸಾವಿತ್ರಿ ಬಾಯಿ ಫುಲೆ ಅವರ ಕೊಡುಗೆ ಮಹತ್ವದ್ದಾಗಿದೆ. ಸಮಾಜವನ್ನು ಮುನ್ನಡೆಸಿದವರನ್ನು ಗೌರವಿಸುವ ಹಾಗು ಸ್ಮರಿಸುವ ಕೆಲಸವಾಗಬೇಕೆಂದರು.

ಸಾನಿಧ್ಯ ವಹಿಸಿದ್ದ ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಮಾತನಾಡಿ, ಜಾತಿಯ ಹೆಸರಿನಲ್ಲಿ ಮನುಷ್ಯರು ತಮ್ಮ ಮಾನವೀಯತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ವಿದ್ಯಾವಂತರಿಂದಲೇ ಅನರ್ಥಗಳು ಹೆಚ್ಚುತ್ತಿರುವುದು ವಿಷಾದನೀಯ. ಅಕ್ಷರ ಜ್ಞಾನದ ಜೊತೆಗೆ ಸಂಸ್ಕಾರವೂ ಅಗತ್ಯ ಎಂದರು.

ಆದಿಚುಂಚನಗಿರಿ ಮಹಾಸ್ವಾಮೀಜಿ ಎಲ್ಲರನ್ನೂ ಸಮಾನವಾಗಿ ಕಂಡಿದ್ದರು. ನೊಂದವರ ಪಾಲಿಗೆ ಮಠ ನಮ್ಮದು ಎಂಬ ಭಾವನೆಯೊಂದಿಗೆ ಕೆಲಸ ಮಾಡಬೇಕು. ಬಾಲಗಂಗಾಧರ ನಾಥ ಸ್ವಾಮೀಜಿ ವಿಶ್ವಮಾನವರಾಗಿದ್ದರು. ಅವರು ಶಾಲೆಗಳನ್ನು ಸ್ಥಾಪಿಸುವುದರ ಜೊತೆಗೆ ಸಂಸ್ಕೃತ ಪಾಠಶಾಲೆಗಳನ್ನು ತೆರೆದು, ಹಳ್ಳಿಗಳಿಗೆ ತೆರಳಿ ಯುವಕರನ್ನು ಕರೆತಂದು ಶಿಕ್ಷಣ ನೀಡಿದರು. ಇದು ನಮ್ಮೆಲ್ಲರ ಭಾಗ್ಯವೆಂದರು.

ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ದೊಡ್ಡಮಗ್ಗೆ ರಂಗಸ್ವಾಮಿ, ಜಾನಪದ ಸಾಹಿತಿ ಮೇಟಿಕೆರೆ ಹಿರಿಯಣ್ಣ, ಜಾನಪದ ವಿದ್ವಾಂಸ ಚಂದ್ರು ಕಾಳೇನಹಳ್ಳಿ, ಗಾಯಕಿ ರತ್ನ ಸಕಲೇಶಪುರ ಅವರನ್ನು ಸನ್ಮಾನಿಸಲಾಯಿತು. ಪ್ರದೀಪ್‌ರಾಮಸ್ವಾಮಿ, ಚಂದ್ರಶೇಖರ್, ಹುಣ್ಣಿಮೆ ಕಾರ್ಯ ಕ್ರಮದ ಸಂಚಾಲಕ ಹೆಚ್.ಬಿ.ಮದನಗೌಡ ಇತರರು ಉಪಸ್ಥಿತರಿದ್ದರು. ಅರಕಲಗೂಡು ಬಿಜಿಎಸ್ ಕಾಲೇಜಿನ ಉಪ ನ್ಯಾಸಕ ಹೆಚ್.ಬಿ.ಮಹೇಶ್ ಸ್ವಾಗತಿಸಿದರು.

## ಎಫ್‌ಐಆರ್: ಪೊಲೀಸರ ವಿರುದ್ಧ ವಿಹೆಚ್‌ಪಿ ಆಕ್ರೋಶ

• ಪ್ರಜೋದಯ ವರದಿ



**ಹಾಸನ:** ಹಿಂದೂ ಮಹಾಗಣಪತಿ ವಿಸರ್ಜನಾ ಮಹೋತ್ಸವದ ವೇಳೆ ಅನುಮತಿ ಇಲ್ಲದೆ ಡಿಜೆ ಬಳಸಿದ ಆರೋಪದ ಮೇಲೆ 15 ಮಂದಿಯ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿರುವುದಕ್ಕೆ ವಿಶ್ವ ಹಿಂದೂ ಪರಿಷತ್ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಮಾತನಾಡಿದ ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹಕಾರ್ಯದರ್ಶಿ ಮಹಿಪಾಲ್, ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ತಾವು ಕೂಡ ಗಮನಿಸಿ ದ್ದೇವೆ. ಆದರೆ, ನಿಯಮಗಳ ಜಾರಿ ಎಲ್ಲರಿಗೂ ಸಮಾನವಾಗಿರಬೇಕು. ಮುಖ್ಯಮಂತ್ರಿ ಹಾಗು ಪ್ರಧಾನಮಂತ್ರಿಗಳ ಕಾರ್ಯಕ್ರಮಗಳು ನಡೆಯುವಾಗಲೂ ಪರಿಸರ ಇಲಾಖೆ ಅಧಿಕಾರಿಗಳನ್ನು ಕರೆಸಿ ಧ್ವನಿಯ ಪ್ರಮಾಣವನ್ನು ಪರಿಶೀಲಿಸುವ ಧೈರ್ಯವನ್ನು ಪೊಲೀಸರು ಪ್ರದರ್ಶಿಸಬೇಕು. ಅಂತಹ ಕಾರ್ಯಕ್ರಮಗಳಲ್ಲಿ ನಿಯಮ ಉಲ್ಲಂಘನೆಯಾದರೆ ಎಫ್‌ಐಆರ್ ದಾಖಲಿಸುತ್ತಾರೆಯೇ ಎಂದು ಪ್ರಶ್ನಿಸಿದರು.

ಐಪಿಎಲ್ ಪಂದ್ಯಾವಳಿಗಳಲ್ಲಿ ಧ್ವನಿಯ ಪ್ರಮಾಣ 124 ಡೆಸಿಬಲ್ ತಲುಪಿರುವುದಾಗಿ ಆಯೋಜಕರೇ ಹೇಳುತ್ತಾರೆ. ಅಂತಹ ಸಂದರ್ಭಗಳಲ್ಲಿ ಆಯೋಜಕರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತದೆಯೇ. ನಗರದ ವಿವಿಧ ಪ್ರಾರ್ಥನಾ ಮಂದಿರಗಳಲ್ಲಿ ಬೆಳಿಗ್ಗೆಯಿಂದ ರಾತ್ರಿಯವರೆಗೆ ನಿಯಮ ಮೀರಿ ಧ್ವನಿವರ್ಧಕಗಳನ್ನು ಬಳಸಲಾಗುತ್ತಿದೆ. ಈ ಬಗ್ಗೆ ಪೊಲೀಸ್ ಇಲಾಖೆ ಕ್ರಮ ಕೈಗೊಂಡಿದೆಯೇ ನಗರದಲ್ಲಿ ಅನಧಿಕೃತ ಫಲಕಗಳ ಹಾವಳಿ ಹೆಚ್ಚಾಗಿದ್ದರೂ ಏಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು.

ಎಂಟು ತಿಂಗಳ ಹಿಂದೆ ಕೆ.ಆರ್. ಪುರಂನಲ್ಲಿ ಅನ್ಯಧರ್ಮೀಯರ ಹಬ್ಬದ ಸಂದರ್ಭದಲ್ಲಿ ರಾತ್ರಿ ಒಂದು ಗಂಟೆಯವರೆಗೆ ಜೋರಾಗಿ ಧ್ವನಿವರ್ಧಕ ಬಳಸಲಾಗಿತ್ತು. ಈ ಕುರಿತು ಎಲ್ಲಾ ಇಲಾಖೆಗಳ ಪ್ರಮುಖ ಅಧಿಕಾರಿಗಳಿಗೆ ದೂರವಾಣಿ ಮೂಲಕ ತಿಳಿಸಿದ್ದೆ. ಹಾಸನ ಜಿಲ್ಲೆಯ ಸೌಹಾರ್ದದ ದೃಷ್ಟಿಯಿಂದ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಆಗ ಮನವಿ ಮಾಡಲಾಗಿತ್ತು. ಆದರೆ, ಈಗ ಅಧಿಕಾರಿಗಳಿಗೆ ಸೌಹಾರ್ದದ ನೆನಪು ಇಲ್ಲವೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ವಿಧಾನಸೌಧ ಚಲೋ ಎಚ್ಚರಿಕೆ**

ಗಣಪತಿ ವಿಸರ್ಜನಾ ಮಹೋತ್ಸವದ ಸಂದರ್ಭದಲ್ಲಿ ಪ್ರಕರಣ ದಾಖಲಿಸಿರುವ ಕ್ರಮವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು. ನಾಲ್ಕು ಎಫ್‌ಐಆರ್ ದಾಖಲಿಸಿರುವುದು ಖಂಡನೀಯ. ಗಣೇಶೋತ್ಸವವನ್ನೇ ಗುರಿಯಾಗಿಸದೆ, ಪರಿಸರದ ಬಗ್ಗೆ ಕಾಳಜಿ ಇದ್ದರೆ ವರ್ಷವಿಡೀ ನಿಯಮಗಳನ್ನು ಸಮಾನವಾಗಿ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

ಗೌರಿ-ಗಣೇಶ ಹಬ್ಬದ ಸಂದರ್ಭದಲ್ಲಿ ಮಾತ್ರ ನಿಯಮಗಳ ಬಗ್ಗೆ ಕಾಳಜಿ ತೋರಿಸಬಾರದು. ಹಿಂದೂ ಸಮಾಜದ ಆಚರಣೆಗಳಿಗೂ ಸೂಕ್ತ ವಿನಾಯಿತಿ ನೀಡುವ ಕುರಿತು ಸರ್ಕಾರ ಚಿಂತಿಸಬೇಕು. ದಾಖಲಿಸಿರುವ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು. ಹಿಂದೂ ಸಮಾಜದ ವಿರುದ್ಧ ದಮನ ನೀತಿ ಮುಂದುವರಿದರೆ ಪ್ರತಿಭಟನೆಗೆ ಸೀಮಿತವಾಗದೆ ವಿಧಾನಸೌಧ ಚಲೋ ನಡೆಸಲಾಗುವುದು. ಈ ದಬ್ಬಾಳಿಕೆಯನ್ನು ನಿಲ್ಲಿಸಬೇಕೆಂದು ಎಚ್ಚರಿಕೆ ನೀಡಿದರು.

## ಮಾಡಾಳು ಸ್ವರ್ಣ ಗೌರಮ್ಮ ಜಾತ್ರೆ ವೈಭವಯುತ ಸಂಪನ್ನ

• ಪ್ರಜೋದಯ ವರದಿ



**ಮಾಡಾಳು:** ಮೂಗುತಿ ಸುಂದರಿ ಎಂದೇ ಪ್ರಖ್ಯಾತಿ ಹೊಂದಿರುವ ಗ್ರಾಮದ ಆರಾಧ್ಯ ದೇವತೆ ಶ್ರೀ ಸ್ವರ್ಣಗೌರಿಅಮ್ಮನವರ ವಿಸರ್ಜನಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖ ದಲ್ಲಿ ಶುಕ್ರವಾರ ಊರಿನ ಕಲ್ಯಾಣಿಯಲ್ಲಿ ನೆರವೇರಿತು.

ಶ್ರಾವಣ ಕಳೆದು ಭಾದ್ರಪದ ಮಾಸ ಬಂತೆದರೆ ದೇಶಾದ್ಯಂತ ಗಣೇಶ ಚತುರ್ಥಿ ಮೆರುಗು ಪಡೆಯುತ್ತದೆ. ಮಾಡಾಳಿನಲ್ಲಿ ಗೌರಮ್ಮನ ಉತ್ಸವ ನಡೆಯುತ್ತದೆ. ನೂತನವಾಗಿ ನಿರ್ಮಿಸಿರುವ ಶಿಲಾ ದೇವಾಲಯದಲ್ಲಿ ಪ್ರತಿಷ್ಠಾಪನೆಗೊಂಡಿರುವ ಕರ್ಪೂರ ಪ್ರಿಯ ಮೂಗುತಿ ಸುಂದರಿ ಮೂಲಸ್ಥಾನ ಶ್ರೀ ಸ್ವರ್ಣ ಗೌರಿ ಅಮ್ಮನವರಿಗೆ 12 ದಿನಗಳ ಕಾಲ ವಿಶೇಷ ಪೂಜೆ ಸಲ್ಲಿಸಿ ಮಹಾ ಮಂಗಳಾರತಿ ಬೆಳಗಿದ ನಂತರ ದೇವಿಯನ್ನು ವಿಸರ್ಜಿಸಲಾಯಿತು.

ಮುಂಜಾನೆ ದೇವಾಲಯದ ಮುಂದೆ ಚಂದ್ರಮಂಡಲೋತ್ಸವಕ್ಕೆ ಸಿದ್ಧತೆಗೊಳಿಸಿದ್ದ ವೇದಿಕೆಯಲ್ಲಿ ಪುಷ್ಪಾಲಂಕೃತ ಮಂಟಪದಲ್ಲಿ ಪ್ರತಿ ಷ್ಠಾಪಿಸಿದ್ದ ಗೌರಿ ದೇವಿಯನ್ನು ಕೋಡಿಮಠದ ಉತ್ತರಾಧಿಕಾರಿ ಚೇತನ್ ಮರಿದೇವರು ಕುಳ್ಳಿರಿಸಿದರು.

ಗ್ರಾಮದ ಆರಾಧ್ಯ ದೈವ ಶ್ರೀ ಗುರು ಚನ್ನಬಸವಣ್ಣ ಅವರನ್ನು ಕೂರಿಸಿದ ಮೇಲೆ ಅರ್ಚಕರು ಮಂಗಳಾರತಿ ಸಲ್ಲಿಸಿದ ನಂತರ ನೂರಾರು ಮಹಿಳೆಯರು ತಮ್ಮ ತಲೆಯ ಮೇಲೆ ದುಗ್ಗಲದ ಬಟ್ಟಲನ್ನು ಹೊತ್ತು ಹರಕೆ ತೀರಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಈ ವೇಳೆ ಕರ್ಪೂರದ ಜ್ಯೋತಿಯ ಬೆಳಕು ಅಮ್ಮನವರಿಗೆ ಪ್ರಕಾಶಮಾನವಾಗಿ ಕಂಡುಬಂದಿತು.

ಬೆಳಿಗ್ಗೆ 11 ಗಂಟೆಗೆ ವೇದಿಕೆಯ ಮೇಲೆ ಕೂರಿಸಿದ್ದ ಪುಷ್ಪಾಲಂಕೃತ ಮಂಟಪವನ್ನು ಹೊತ್ತ ಭಕ್ತರು ದೇವಿ ಮಡಿಲಕ್ಕಿ ಸೇವೆಗೆ ಉತ್ಸವ ದೊಡನೆ ಗ್ರಾಮದ ಬೀದಿಗಳಲ್ಲಿ ಸಾಗಿದರು. ಉತ್ಸವ ಸಾಗುವ ಮಾರ್ಗದಲ್ಲಿ ಮಹಿಳೆ ಯರು ನೀರು ಹಾಕಿ ಬಣ್ಣ ಬಣ್ಣದ ಚಿತ್ತಾರದ ರಂಗೋಲಿ ಬಿಡಿಸಿ ದೇವಿಯನ್ನು ಸ್ವಾಗತಿಸಿದರು.

ವಿಸರ್ಜನಾ ಮಹೋತ್ಸವದ ಅಂಗವಾಗಿ ಗ್ರಾಮವು ಮದುವಣಗಿತ್ತಿಯಂತೆ ತಳಿರು ತೋರಣ, ಬಾಳೆ ಕಂದುಗಳಿಂದ ಸಿಂಗರಿಸಿದ್ದರೆ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದು ಭಕ್ತರ ಕಣ್ಮನ ಸೆಳೆಯಿತು. ಸಂಜೆ 4 ಗಂಟೆಗೆ ದೇವಿ ವಿಸರ್ಜನೆಯನ್ನು ಮಾಡಿದ ನಂತರ 12 ದಿನಗಳ ಕಾಲವೈಭವಯುತವಾಗಿ ನಡೆದ ಜಾತ್ರೆ ಸಂಪನ್ನಗೊಂಡಿತು. ಐನಹಳ್ಳಿ ಪ್ರಶಾಂತ್ ದೇವರು, ಡಿವೈಎಸ್ಪಿ ಗೋಪಿ, ಪಿಎಸ್‌ಐ ಸುರೇಶ್, ಕೋಡಿಮಠದ ಮಹದೇವಪ್ಪ ಉಪಸ್ಥಿತರಿದ್ದರು.

## ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಜಾಕ್ಕೆ ಆಗ್ರಹ

• ಪ್ರಜೋದಯ ವರದಿ




**ಹಾಸನ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಕೂಡಲೇ ಹುದ್ದೆಯಿಂದ ವಜಾಗೊಳಿಸಿ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಹಾಗು ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿ ಸೆ.28ರಂದು ನಗರದಲ್ಲಿ ಪ್ರತಿಭಟನೆ ನಡೆಸಲಾಗುವುದೆಂದು ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್.ಮಂಜುನಾಥ್ ಶರ್ಮಾ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿ ಪರಿಷ್ಕರಣೆ ಸೇರಿ ಚುನಾವಣಾ ಆಯೋಗದ ಇತ್ತೀಚಿನ ಕಾರ್ಯವೈಖರಿ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಆಯೋಗದಲ್ಲಿ ಚುನಾವಣಾ ಆಯುಕ್ತರಾದ ಸುಖ್‌ಬೀರ್ ಸಿಂಗ್ ಸಂಧು ಹಾಗೂ ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ವಿವಿಧ ನಿರ್ಧಾರಗಳ ಕುರಿತು 14 ಬಾರಿ ಲಿಖಿತ ಆಕ್ಷೇಪಣೆ ಸಲ್ಲಿಸಿದ್ದಾರೆಂಬ ವರದಿಗಳು ಬಂದಿವೆ ಎಂದು ಹೇಳಿದರು.

ಮತದಾರರ ಸೇರ್ಪಡೆ, ಹೆಸರುಗಳ ಅಳಿಸುವಿಕೆ ಹಾಗು ಮರುಸ್ಥಾಪನೆ, ನಮೂನೆ 6 ಮತ್ತು ಮತದಾರರ ಡಿಜಿಟಲ್ ವ್ಯವಸ್ಥೆಗೆ ಸಂಬಂಧಿಸಿದ ಹಲವು ವಿಚಾರಗಳಲ್ಲಿ ಆಕ್ಷೇಪಣೆಗಳು ವ್ಯಕ್ತವಾಗಿವೆ. ಕೆಲವು ನಿರ್ಧಾರಗಳನ್ನು ತಮ್ಮ ಗಮನಕ್ಕೆ ತರದೆ ಅಥವಾ ಅನುಮೋದನೆ ಪಡೆಯದೆ ಕೈಗೊಳ್ಳಲಾಗಿದೆ ಎಂದು ಇಬ್ಬರು ಚುನಾವಣಾ ಆಯುಕ್ತರು ಆಕ್ಷೇಪಿಸಿದ್ದಾರೆಂಬ ವರದಿಗಳಿವೆ ಎಂದು ತಿಳಿಸಿದರು.

ಈ ಬೆಳವಣಿಗೆಗಳಿಂದ ಚುನಾವಣಾ ಆಯೋಗದ ಸ್ವಾಯತ್ತತೆ, ಪಾರದರ್ಶಕತೆ ಹಾಗೂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಕುರಿತು ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯುತ್ತಿದೆ. ಅರ್ಹ ಮತದಾರರನ್ನು ಗುರುತಿಸಿ ಮತದಾರರ ಪಟ್ಟಿಯಲ್ಲಿ ಉಳಿಸಿಕೊಳ್ಳುವುದು ಪರಿಷ್ಕರಣೆಯ ಉದ್ದೇಶವಾಗಿರಬೇಕು. ಆದರೆ, ಎಸ್‌ಐಆರ್ ಪ್ರಕ್ರಿಯೆಯಿಂದ ಅರ್ಹ ಮತದಾರರ ಹೆಸರುಗಳು ಪಟ್ಟಿಯಿಂದ ಹೊರಗುಳಿಯುವ ಆತಂಕವಿದೆ ಎಂದು ಆರೋಪಿಸಿದರು.

ಜಿಲ್ಲಾ ಕಾಂಗ್ರೆಸ್ ವಕ್ತಾರ ಸಲೀಂ ಕೊಲ್ಲಹಳ್ಳಿ ಮಾತನಾಡಿ, ದೇಶದಲ್ಲಿ 13 ಕೋಟಿ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡಲಾಗಿದೆ ಎಂಬ ಆರೋಪಗಳಿವೆ. ಎಸ್‌ಐಆರ್ ಪ್ರಕ್ರಿಯೆ ಕಾನೂನುಬದ್ಧವಾಗಿ ನಡೆದಿದ್ದರೆ ಅದನ್ನು ಸ್ವಾಗತಿಸು ತ್ತೇವೆ. ಆದರೆ, ದುರುದ್ದೇಶದಿಂದ ಅರ್ಹ ಮತದಾರರನ್ನು ಪಟ್ಟಿಯಿಂದ ಕೈಬಿಟ್ಟು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಹಕ್ಕಿಗೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಸಮಗ್ರ ತನಿಖೆ ನಡೆಸ ಬೇಕು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆ ಯಿಂದ ವಜಾಗೊಳಿಸಿ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

## ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹ

• ಪ್ರಜೋದಯ ವರದಿ




**ಹಾಸನ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸಾಕಷ್ಟು ಅಕ್ರಮ ಎಸಗಿದ್ದು ಕೂಡಲೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಎಡಪಕ್ಷಗಳಿಂದ ಶನಿವಾರ ನಗರದ ಹೇಮಾವತಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಮೂವರು ಚುನಾವಣಾ ಆಯುಕ್ತರಲ್ಲಿ ಇಬ್ಬರು ಎತ್ತಿದ ಸಮಸ್ಯೆಗಳ ಕುರಿತು ಸೆ.23 ರಂದು ಮಾಧ್ಯಮಗಳಲ್ಲಿ ಪ್ರಕಟವಾದ ವರದಿಯು ಜ್ಞಾನೇಶ್ ಕುಮಾರ್ ಅವರ ಅಧೀನದಲ್ಲಿ ಚುನಾವಣಾ ಆಯೋಗ ಹೇಗೆ ಕಾರ್ಯ ನಿರ್ವಹಿಸುತ್ತಿದೆಂಬ ಬಗ್ಗೆ ಕೆಲವು ಪ್ರಶ್ನೆಗಳನ್ನು ಎತ್ತುತ್ತವೆ. ಇವು ಕೇವಲ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಶೀಲನೆ (ಎಸ್‌ಐಆರ್)ಗೆ ಸೀಮಿತವಲ್ಲ. ಭಾರತ ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಮತ್ತು ಸಮಗ್ರತೆಯ ಬಗ್ಗೆಯೂ ಗಂಭೀರ ಆತಂಕಗಳನ್ನು ಎತ್ತುತ್ತವೆ. ಅವು ಮುಖ್ಯ ಚುನಾವಣಾ ಆಯುಕ್ತರ ಕಚೇರಿಯ ವಿರುದ್ಧ ದೋಷಾರೋಪಣೆಯಾಗಿದೆ ಮತ್ತು ಆ ಕಚೇರಿ ವಿಶ್ವಾಸಾರ್ಹತೆ ಕಳೆದುಕೊಂಡಿದೆ ಎಂದರು.

ಮೂವರಲ್ಲಿ ಇಬ್ಬರು ಚುನಾವಣಾ ಆಯುಕ್ತರು ಕನಿಷ್ಟ 14 ಸಂದರ್ಭಗಳಲ್ಲಿ ಮತದಾರರ ನೋಂದಣಿ, ಹೆಸರು ಅಳಿಸುವಿಕೆ ಮತ್ತು ಮರುಸ್ಥಾಪನೆ ಹಾಗು ಎಸ್‌ಐಆರ್ ನಡವಳಿಕೆಗೆ ಸಂಬಂಧಿಸಿದ ನಿರ್ಧಾರಗಳಿಗೆ ಆಕ್ಷೇಪ ದಾಖಲಿಸಿದ್ದಾರೆ. ತಮ್ಮ ಒಪ್ಪಿಗೆಯಿಲ್ಲದೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವ ಬಗ್ಗೆ ಗಂಭೀರ ಆತಂಕಗಳನ್ನೂ ವ್ಯಕ್ತಪಡಿಸಿದ್ದಾರೆ. ಈಗ ಬಹಿರಂಗಗೊಂಡಿರುವ ಅಂಶಗಳು ವಿರೋಧ ಪಕ್ಷಗಳು ಮತ್ತು ನಾಗರಿಕ ಸಂಘಟನೆಗಳು ಪದೇ ಪದೇ ಎತ್ತಿದ ಆತಂಕಗಳನ್ನು ದೃಢಪಡಿಸುತ್ತವೆ. ಎಸ್‌ಐಆರ್ ಹಾಗು ಮತದಾರರ ಪಟ್ಟಿ ನಿರ್ವಹಣೆ ಪಾರದರ್ಶಕ ಹಾಗು ವಿಕೇಂದ್ರೀಕೃತ ಎಂಬ ಹೇಳಿಕೆಗಳ ಟೊಳ್ಳುತನವನ್ನು ಬಯಲು ಮಾಡುತ್ತವೆ. ಆ ಇಬ್ಬರು ಆಯುಕ್ತರು ಮತದಾರರ ಡೇಟಾಬೇಸನ್ನು ಕ್ರಮೇಣ ಕೇಂದ್ರೀಕರಣ ಮತ್ತು ರಾಜ್ಯ ಹಾಗೂ ಕ್ಷೇತ್ರ ಮಟ್ಟದ ಶಾಸನಬದ್ಧ ಅಧಿಕಾರಿಗಳ ಪ್ರವೇಶದ ಮೇಲಿನ ನಿರ್ಭಂಧಗಳನ್ನು ನಿರ್ದಿಷ್ಟವಾಗಿ ಎತ್ತಿತೋರಿಸಿದ್ದಾರೆ. ಅದರ ಪರಿಣಾಮಗಳು ಕೇವಲ ಆಡಳಿತಾತ್ಮಕವಲ್ಲ ಎಂದರು.

ಭಾರತ ಚುನಾವಣಾ ಆಯೋಗದ ವಿಶ್ವಾಸಾರ್ಹತೆ ಮತ್ತು ಸ್ವಾತಂತ್ರ್ಯ ಇಷ್ಟು ಕೆಳಮಟ್ಟಕ್ಕೆ ಎಂದೂ ಇಳಿದಿರಲಿಲ್ಲ. ಮುಖ್ಯಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವ್ಯವಸ್ಥೆಯನ್ನು ಕೆಟ್ಟದಾಗಿ ನಿರ್ವಹಿಸಿ ಸಂಸ್ಥೆಯಲ್ಲಿ ಜನರ ವಿಶ್ವಾಸವನ್ನು ಕುಗ್ಗಿಸಿದ್ದಕ್ಕೆ ಹೊಣೆಗಾರರಾಗಬೇಕೆಂದು ಒತ್ತಾಯಿಸಿದರು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್, ಸಿಪಿಐ ಜಿಲ್ಲಾ ಕಾರ್ಯದರ್ಶಿ ಧರ್ಮರಾಜ್, ಸಿಪಿಐಎಂ ಮುಖಂಡರಾದ ಧರ್ಮೇಶ್, ಮುಖಂಡರಾದ ಎಂ.ಸಿ.ಡೋಂಗ್ರೆ, ಜನಪರ ಸಂಘಟನೆಗಳ ವಿಜಯ್ ಕುಮಾರ್ ದಂಡೋರ, ಮುಬಶಿರ್ ಅಹಮದ್, ಅನ್ಸರ್, ಹರೀಶ್, ರಮೇಶ್, ಗಿರೀಶ್ ಮತ್ತಿತರರಿದ್ದರು.

## ಪ್ರತ್ಯೇಕ ಅಪಘಾತ: ಇಬ್ಬರ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ವಿವಿಧೆಡೆ ನಡೆದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿರುವ ಘಟನೆ ಶುಕ್ರವಾರ ನಡೆದಿದೆ.

ಹೊಳೆನರಸೀಪುರ ರಸ್ತೆಯ ತೇಜಿಗೆರೆ ಸಮೀಪ ಕ್ಯಾಂಟರ್ ಡಿಕ್ಕಿಯಾಗಿ ಬೈಕ್ ಸವಾರ ಮೃತ ಪಟ್ಟಿದ್ದಾರೆ. ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿ ಕೋಡಿಹಳ್ಳಿಯ ನಂಜುಂಡೇಗೌಡ ಮೃತರು. ಪುತ್ರಿ ನಿಶ್ಚಿತಾ ಅವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಶುಕ್ರವಾರ ಸಂಜೆ 7ರ ಸಮಯದಲ್ಲಿ ಚನ್ನರಾಯಪಟ್ಟಣದಿಂದ ಪುತ್ರಿಯನ್ನು ಊರಿಗೆ ಕರೆದುಕೊಂಡು ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಕ್ಯಾಂಟರ್ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೈಕ್ ಸಂಪೂರ್ಣ ಜಖಂ ಗೊಂಡಿದೆ. ಗ್ರಾಮಾಂತರಠಾಣೆಯಲ್ಲಿಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಅಶೋಕ ಲೈಲ್ಯಾಂಡ್ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಜೋಳೇನಹಳ್ಳಿ ಹಂಪ್ಸ್ ಬಳಿ ನಡೆದಿದೆ.

ಕಸಬಾ ಹೋಬಳಿ ಮಳ್ಳೇನಹಳ್ಳಿಯ ಗುರುರಾಜ ಮೃತರು. ಬೈಕ್‌ನಲ್ಲಿ ಹೋಗುತ್ತಿದ್ದಾಗ ಚನ್ನರಾಯಪಟ್ಟಣ ಕಡೆ ಯಿಂದ ವೇಗವಾಗಿ ಬಂದ ಅಶೋಕ ಲೈಲ್ಯಾಂಡ್ ವಾಹನ ಡಿಕ್ಕಿ ಯಾಗಿದೆ. ತಲೆ ಮತ್ತು ಎದೆ ಭಾಗಕ್ಕೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK